ಭಾಗ – 2

## ಕೈಮಗ್ಗಗಳ ಅಭಿವೃದ್ಧಿ ಆಯುಕ್ತರ ಕಚೇರಿ

## 11 ನೇ ಪಂಚವಾರ್ಷಿಕ ಯೋಜನೆ (2007–08 ರಿಂದ 2011–12ರ ವರೆಗೆ) ಗಾಗಿ ಮಾರುಕಟ್ಟೆ ಮತ್ತು ರಫ್ತು ಪ್ರವರ್ತನಾ ಯೋಜನೆ

### 1.0 ಪೀಠಿಕೆ

ಭಾರತದಲ್ಲಿನ ಕೈಮಗ್ಗ ವಲಯದ ಬೆಳವಣಿಗೆ ಮತ್ತು ಅಭಿವೃದ್ಧಿಗಾಗಿ ವಾಣಿಜ್ಯ ಸರಕು ಮತ್ತು ಮಾರುಕಟ್ಟೆಗಳ ಕೇಂದ್ರ ಬಿಂದುವೆಂದು ಗುರುತಿಸಲ್ಪಟ್ಟಿದೆ. ಉತ್ಪಾದಕರು ಮತ್ತು ಗ್ರಾಹಕರ ನಡುವೆ ಸಂಪರ್ಕ ಒದಗಿಸುವ ಸಲುವಾಗಿ ಸ್ಥಳೀಯ ಮಾರುಕಟ್ಟೆ ಅವಶ್ಯಕ. ಈ ನಿಟ್ಟಿನಲ್ಲಿ ಕೈಮಗ್ಗ ಅಭಿವೃದ್ಧಿ ಆಯುಕ್ತರ ಕಚೇರಿಯು 10ನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ಮಾರುಕಟ್ಟೆಯ ಪ್ರವರ್ತಕ ಯೋಜನೆ ಎಂಬ ಹೆಸರಿನ ಯೋಜನೆಯೊಂದನ್ನು ಜಾರಿಗೊಳಿಸುತ್ತಿದ್ದು, ಈ ಯೋಜನೆಯು ವಸ್ತುಪ್ರದರ್ಶನಗಳನ್ನು ಏರ್ಪಡಿಸುವಿಕೆ, ಕರಕುಶಲ ಮೇಳಗಳು, ಮಾರುಕಟ್ಟೆ ಸಂಕೀರ್ಣಗಳು ಮತ್ತು ಅರ್ಬನ್ ಹಾತ್‌ಗಳು, ಪ್ರಚಾರ ಜಾಗೃತಿ ಮತ್ತು ಬ್ರಾಂಡ್ ಅಭಿವೃದ್ಧಿ ಮುಂತಾದವುಗಳನ್ನು ಒಳಗೊಂಡಿದ್ದುದಲ್ಲದೇ, ಈ ಮೂಲಕ ದೇಶದಲ್ಲಿ ಕೈಮಗ್ಗದ ಉತ್ಪನ್ನಗಳ ಮಾರಾಟದ ಪ್ರವರ್ತನೆ ಹಾಗೂ ನೇಕಾರರು ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಿಕೆಗಳಿಂದ ಕೈಮಗ್ಗದ ವಲಯದ ಒಟ್ಟಾರೆ ಅಭಿವೃದ್ಧಿಗೆ ನೆರವಾಗುವ ಉದ್ದೇಶ ಹೊಂದಿತ್ತು. ಸ್ಥಳೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಮಾರಾಟ ಸಂವರ್ಧನೆಗಾಗಿ ಯಾವುದೇ ದೀರ್ಘಾವಧಿ ಕಾರ್ಯತಂತ್ರ, ಬ್ರಾಂಡ್ ನಿರ್ಮಾಣದ ಪ್ರಾಮುಖ್ಯತೆಯನ್ನು ಗಮನದಲ್ಲಿಟ್ಟುಕೊಂಡು, ಈ ಯೋಜನೆಯು ಕೈಮಗ್ಗದ ಹೆಗ್ಗುರುತಿನ ಮೂಲಕ ಭಾರತೀಯ ಕೈಮಗ್ಗದ ಉತ್ಪನ್ನಗಳ ಬ್ರಾಂಡ್ ಪ್ರವರ್ತನೆಯತ್ತ ಗಮನ ಹರಿಸಿತು.

ಅಂತೆಯೇ ಕೈಮಗ್ಗದ ಉತ್ಪನ್ನಗಳ ರಫ್ತು ಉತ್ತೇಜಿಸಲು ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿಯ 10ನೇ ಯೋಜನೆಯ ಅವಧಿಯಲ್ಲಿ ಕೈಮಗ್ಗದ ಉತ್ಪನ್ನ ಯೋಜನೆಯನ್ನು ಜಾರಿಮಾಡಿದೆ. ಕೈಮಗ್ಗ ರಫ್ತು ಯೋಜನೆಯಲ್ಲಿ ಕೈಮಗ್ಗ ಏಜೆನ್ಸಿಗಳಿಗೆ ರಫ್ತುಯೋಗ್ಯ ಕೈಮಗ್ಗದ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟಕ್ಕಾಗಿ ಸಜ್ಜುಗೊಳ್ಳಲು ನೆರವು ನೀಡುವ ಗುರಿ ಹೊಂದಲಾಗಿತ್ತು. ಈ ಯೋಜನೆಯು, ರಫ್ತುಮಾಡಲು ಅರ್ಹವಾದ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವಿಕೆ, ಉತ್ಪನ್ನಗಳ ಪ್ರಚಾರ ಹಾಗೂ ಅಂತರರಾಷ್ಟ್ರೀಯ ಪ್ರದರ್ಶನಗಳು, ಖರೀದಿದಾರರು–ಮಾರಾಟಗಾರರ ಸಮಾವೇಶಗಳಲ್ಲಿ ಪಾಲುಗೊಳ್ಳುವ ಮೂಲಕ ಅಂತರ್ರಾಷ್ಟ್ರೀಯ ಮಾರುಕಟ್ಟೆಗಳಿಸುವುದು ಮುಂತಾದವನ್ನು ಒಳಗೊಂಡಿತ್ತು.

ದೇಶೀಯ ಮತ್ತು ರಫ್ತು ಮಾರುಕಟ್ಟೆಗಳಲ್ಲಿ ಮಾರಾಟದ ಅವಕಾಶಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ, ಅವುಗಳ ನಡುವೆ ಸಮಗ್ರ ಸ್ವರೂಪದ ಸಂಪರ್ಕಗಳನ್ನು ಸಾಧಿಸುವ ಸಲುವಾಗಿ 10ನೇ ಯೋಜನೆಯ ಕೈಮಗ್ಗ ರಫ್ತು ಯೋಜನೆಯ ಮಾರುಕಟ್ಟೆಯ ಪ್ರವರ್ತನೆಯ ಕಾರ್ಯಕ್ರಮವನ್ನು ಕೆಲವೊಂದು ಮಾರ್ಪಾಡುಗಳೊಂದಿಗೆ ಹಾಗೂ ಹೊಸದಾದ ಕೆಲವು ಅಂಶಗಳೊಂದಿಗೆ ಸಂಯೋಜಿಸಿ 11ನೇ ಯೋಜನೆಯಡಿಯಲ್ಲಿ "ಮಾರುಕಟ್ಟೆ ಮತ್ತು ರಫ್ತು ಪ್ರವರ್ತನೆ ಯೋಜನೆ" ಎಂಬ ಹೆಸರಿನೊಂದಿಗೆ ಜಾರಿಗೊಳಿಸಲು ನಿರ್ಧರಿಸಲಾಗಿದೆ. 11ನೇ ಯೋಜನೆಯಲ್ಲಿನ ಮಾರುಕಟ್ಟೆ ಮತ್ತು ರಫ್ತು ಪ್ರವರ್ತನೆ ಯೋಜನೆಯು ಕೆಳಕಂಡ ಎರಡು ಉಪಾಂಗಗಳೊಂದಿಗೆ ಕೇಂದ್ರ ಪ್ರಾಯೋಜಿತ ಯೋಜನೆಯಾಗಿ ಪರಿಚಯಿಸಲ್ಪಟ್ಟಿದೆ.

1. ಮಾರುಕಟ್ಟೆಯ ಪ್ರವರ್ತನೆ
2. ಕೈಮಗ್ಗ ರಫ್ತು ಪ್ರವರ್ತನೆ

**2.0 ಮಾರುಕಟ್ಟೆಯ ಪ್ರವರ್ತನೆಯ ಉದ್ದೇಶಗಳು :**

i) ರಾಷ್ಟ್ರೀಯ, ಪ್ರಾಂತೀಯ, ರಾಜ್ಯ ಮತ್ತು ಜಿಲ್ಲಾಮಟ್ಟದಲ್ಲಿ ಪ್ರದರ್ಶನಗಳನ್ನು ಏರ್ಪಡಿಸಿ ಕೈಮಗ್ಗದ ಉತ್ಪನ್ನಗಳ ಮಾರಾಟಕ್ಕೆ ನೆರವಾಗುವುದು.

ii) ಒಂದೇ ಸೂರಿನಡಿಯಲ್ಲಿ ದೇಶದ ವಿವಿಧ ಭಾಗಗಳ ನೈಜ ಕೈಮಗ್ಗ ಉತ್ಪನ್ನಗಳನ್ನು ಖರೀದಿಸಲು ಗ್ರಾಹಕರಿಗೆ ಸೌಲಭ್ಯಗಳನ್ನು ಒದಗಿಸುವುದು.

iii) ಕೈಮಗ್ಗದ ವಲಯದಲ್ಲಿ ಉತ್ಪಾದಿತವಾಗುವ ವಸ್ತುಗಳ ಇತ್ತೀಚಿನ ವಿನ್ಯಾಸ ಮತ್ತು ವೈವಿಧ್ಯತೆಗಳ ಬಗ್ಗೆ ಗ್ರಾಹಕರಲ್ಲಿ ಅರಿವು ಮೂಡಿಸಲು ವೇದಿಕೆ ಒದಗಿಸುವುದು.

iv) ಗ್ರಾಹಕರಿಗೆ ಒಂದೇ ತಾಣದಲ್ಲಿ ಗುಣಮಟ್ಟದ ಕೈಮಗ್ಗ ಉತ್ಪನ್ನಗಳು ಲಭ್ಯವಾಗುವಂತೆ ಮಾಡಲು ಖಾಯಂ ಮಳಿಗೆಗಳನ್ನು ಸ್ಥಾಪಿಸುವ ಉದ್ದೇಶದಿಂದ, ಪ್ರಮುಖ ನಗರಗಳಲ್ಲಿ ಕೈಮಗ್ಗ ಏಜೆನ್ಸಿಗಳಿಗೆ ಮಾರುಕಟ್ಟೆಯ ಮೂಲಭೂತ ಸೌಕರ್ಯ ಬೆಂಬಲ ಒದಗಿಸುವುದು.

v) ಕೈಮಗ್ಗ ವಸ್ತ್ರಗಳ ಮಾರುಕಟ್ಟೆ ವಿಸ್ತರಿಸುವ ಉದ್ದೇಶದಿಂದ ಒಂದೇ ತಾಣದಲ್ಲಿ ವಿವಿಧ ರಾಜ್ಯಗಳ ಕೈಮಗ್ಗದ ಉತ್ಪನ್ನಗಳ ಸರಕುಗಳು ದೊರಕುವಂತೆ ಆವಕಾಶ ಕಲ್ಪಿಸುವುದು.

vi) ಕೈಮಗ್ಗದ ನೇಕಾರರಲ್ಲಿ ವಿನ್ಯಾಸ ಮತ್ತು ತಾಂತ್ರಿಕ ಆವಿಷ್ಕಾರಗಳನ್ನು ಪ್ರೋತ್ಸಾಹಿಸುವುದು ಹಾಗೂ ಸಾಂಪ್ರದಾಯಿಕ ಕೌಶಲ್ಯ ಮತ್ತು ವಿನ್ಯಾಸಗಳನ್ನು ಸಂರಕ್ಷಿಸಿಕೊಳ್ಳುವುದು.

vii) ಕೈಮಗ್ಗ ನೇಕಾರರು ಮತ್ತು ಏಜೆನ್ಸಿಗಳಿಗೆ ಮಾರುಕಟ್ಟೆಯ ಮೂಲಭೂತ ಸೌಕರ್ಯ ಸೃಷ್ಟಿಗಾಗಿ ನೆರವಾಗವುದು.

viii) ಅಂತರ ರಾಷ್ಟ್ರೀಯ ಪ್ರಾಮುಖ್ಯತೆಯ ಕೈಮಗ್ಗದ ಬ್ರಾಂಡ್‌ಗಳನ್ನು ಅಂತರರಾಷ್ಟ್ರೀಯ ಮಾರುಕಟ್ಟೆಗಾಗಿ ಅಭಿವೃದ್ಧಿಪಡಿಸಿ, ಪ್ರಾಯೋಜಿಸಿ ಬ್ರಾಂಡ್‌ನಿಂದ ಗುರುತಿಸಲ್ಪಡುವುದನ್ನು ಬೆಂಬಲಿಸುವುದು.

ix) ಕೈಮಗ್ಗದ ವಲಯದ ಗುಣಮಟ್ಟ ಮತ್ತು ಉತ್ಪಾದಕತೆಯನ್ನು ಸುಧಾರಿಸುವ ಸಲುವಾಗಿ ನೇಕಾರರಲ್ಲಿ ತಂತ್ರಜ್ಞಾನದ ಬೆಳವಣಿಗೆಗಳು ಮತ್ತು ಪ್ರಗತಿಗಳ ಬಗ್ಗೆ ಜಾಗೃತಿ ಮೂಡಿಸುವುದು.

**3.0 ಮಾರುಕಟ್ಟೆಯ ಪ್ರವರ್ತನೆಯಡಿಯಲ್ಲಿ ಉಪ ಅಂಶಗಳು :**

ಮಾರುಕಟ್ಟೆಯ ಪ್ರವರ್ತನೆಯು ಕೈಮಗ್ಗ ವಸ್ತ್ರಗಳ ಉತ್ತೇಜನ ಮತ್ತು ಮಾರಾಟಗಳಿಗಾಗಿ ವಿವಿಧ ಚಟುವಟಿಕೆಗಳನ್ನು ಪ್ರೋತ್ಸಾಹಿಸುತ್ತದೆ. ಅನುಷ್ಠಾನ ಮತ್ತು ಉಸ್ತುವಾರಿಗಳನ್ನು ಸುಲಭವಾಗಿಸಲು ಈ ಚಟುವಟಿಕೆಗಳನ್ನು ಕೆಳಕಂಡ ಉಪಾಂಗಗಳ ಮೂಲಕ ನಿರ್ವಹಿಸಲಾಗುತ್ತದೆ.

* ಪ್ರದರ್ಶನಗಳು, ಈವೆಂಟ್‌ಗಳು ಮತ್ತು ಕರಕುಶಲ ಮೇಳಗಳನ್ನು ಸಂಘಟಿಸುವುದು.

* ಅರ್ಬನ್ ಹಾತ್‌ಗಳನ್ನು ಸ್ಥಾಪಿಸುವುದು

* ಮಾರುಕಟ್ಟೆ ಸಂಕೀರ್ಣಗಳ ಸ್ಥಾಪನೆ

* ಪ್ರಚಾರ ಮತ್ತು ಅರಿವು ಮೂಡಿಸುವಿಕೆ

* ಭೌಗೋಳಿಕ ಸೂಚಕ ಅಧಿನಿಯಮ (ಜಿ.ಐ.ಆ್ಯಕ್ಟ್)

* ಕೈಮಗ್ಗ ಮಾರುಕಟ್ಟೆ ಸಂಕೀರ್ಣ, ಜನಪಥ್, ನವದೆಹಲಿ

* ಕೈಮಗ್ಗ ಹೆಗ್ಗುರುತು (ಹ್ಯಾಂಡ್‌ಲೂಮ್ ಮಾರ್ಕ್)

ಮೇಲ್ಕಂಡ ಉಪಾಂಗಗಳ ಮುಖ್ಯ ಚಟುವಟಿಕೆಗಳ ವಿವರಗಳು, ಅನುಷ್ಠಾನ ಏಜೆನ್ಸಿಗಳು ಮತ್ತು ಅವುಗಳಿಗೆ ಮೇಲ್ಕಂಡ ಉಪಾಂಗಗಳಿಗೆ ಸಂಬಂಧಿಸಿದಂತೆ ಹಣಕಾಸಿನ ನೆರವು ನೀಡುವ ವಿಧಾನಗಳು ಕೆಳಕಂಡಂತಿವೆ

**3.1 ಪ್ರದರ್ಶನಗಳು, ಈವೆಂಟ್‌ಗಳು ಮತ್ತು ಕರಕುಶಲ ಮೇಳಗಳನ್ನು ಸಂಘಟಿಸುವಿಕೆ**

ಕೈಮಗ್ಗ ನೇಕಾರರಿಗೆ ತಮ್ಮ ಉತ್ಪನ್ನಗಳ ಮಾರಾಟಕ್ಕಾಗಿ ಅವಕಾಶ ಕಲ್ಪಿಸುವ ಹಾಗೂ ಗ್ರಾಹಕರಿಗೆ ದೇಶದ ವಿವಿಧ ಭಾಗಗಳ ಕೈಮಗ್ಗ ಉತ್ಪನ್ನಗಳ ಬಗ್ಗೆ ಪರಿಚಯ ಉಂಟುಮಾಡಲು ರಾಷ್ಟ್ರ, ರಾಜ್ಯ, ಪ್ರಾಂತ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಅನೇಕ ಕೈಮಗ್ಗ ವಸ್ತ್ರಗಳ ಪ್ರದರ್ಶನ ಏರ್ಪಡಿಸುವುದು. ಅಲ್ಲದೇ ಈ ಉಪಾಂಗವು ವಸ್ತುವಿಶಿಷ್ಟ, ಪ್ರದೇಶ ವೈಶಿಷ್ಟ್ಯ ಹಾಗು ವಿಶಿಷ್ಟ ನೂಲುಗಳ ಕೈಮಗ್ಗ ಉತ್ಪನ್ನಗಳ ಮಾರಾಟ ಮತ್ತು ಪ್ರವರ್ತನೆಗೆ ಅವಕಾಶಕಲ್ಪಿಸುತ್ತವೆ. ಕೈಮಗ್ಗ ನೇಕಾರರು ಕರಕುಶಲ ಮೇಳಗಳಲ್ಲಿ ಭಾಗವಹಿಸಲು ನೆರವಾಗಿ, ಗ್ರಾಹಕರಿಗೆ ಒಂದೇ ಸೂರಿನಡಿ ವೈವಿಧ್ಯಮಯ ಕೈಮಗ್ಗ ಉತ್ಪನ್ನಗಳು ಲಭ್ಯವಾಗುವಂತೆಯೂ ಮಾಡುತ್ತದೆ.

### 3.1.1 ರಾಷ್ಟ್ರೀಯ ಹ್ಯಾಂಡ್‌ಲೂಮ್ ಎಕ್ಸ್‌ಪೋ

ಕೈಮಗ್ಗ ಅಭಿವೃದ್ಧಿ ಆಯುಕ್ತರ ಕಚೇರಿಯು ಮಾರಾಟ ಕಾರ್ಯತಂತ್ರ ಮತ್ತು ಪ್ರಚಾರ ಕ್ರಮಗಳ ಭಾಗವಾಗಿ ರಾಷ್ಟ್ರೀಯ ಕೈಮಗ್ಗದ ಎಕ್ಸ್‌ಪೋ ಮತ್ತು ವಿಶೇಷ ಎಕ್ಸ್‌ಪೋಗಳನ್ನು ಆಯೋಜಿಸುತ್ತಿದೆ. ಕಾಲಾಂತರದಲ್ಲಿ ಈ ಪ್ರದರ್ಶನಗಳು ಜನಪ್ರಿಯತೆಗಳಿಸುತ್ತಿದ್ದು, ಈ ಪ್ರದರ್ಶನಗಳಲ್ಲಿನ ಮಾರಾಟದ ಪ್ರಮಾಣದಲ್ಲಿ ಗಮನಾರ್ಹ ಏರಿಕೆ ಉಂಟಾಗಿದೆ. ಈ ಎಕ್ಸ್‌ಪೋಗಳನ್ನು 2ರಿಂದ 3 ವಾರಗಳ ಅವಧಿಗೆ ಏರ್ಪಡಿಸಲಾಗುತ್ತದೆ. ಪ್ರತಿ ವರ್ಷವೂ ಪ್ರದರ್ಶನಗಳ ಸಂಖ್ಯೆ, ಸ್ಥಳ ಮತ್ತು ಕಾಲಾವಧಿಯನ್ನು ಅಭಿವೃದ್ಧಿ ಆಯುಕ್ತ(ಕೈಮಗ್ಗ)ರು ರಾಷ್ಟ್ರೀಯ ಕೈಮಗ್ಗ ಸಂಘಟನೆಗಳ ಮನವಿ, ರಾಜ್ಯ ಮತ್ತು ಅದರ ಏಜೆನ್ಸಿಗಳ ಮನವಿಗಳನ್ನಾಧರಿಸಿ ಪ್ರಸ್ತಾವಿಕ ಸ್ಥಳಗಳ ಮಾರುಕಟ್ಟೆಯ ಸಂಭಾವ್ಯತೆಗೆ ತಕ್ಕಂತೆ, ಹಣದ ಲಭ್ಯತೆ, ಜಿಲ್ಲಾ ಮೇಳಗಳ ಪೂರ್ವನಿಶ್ಚಿತ ಸಮಯಗಳಿಗನುಗುಣವಾಗಿ ನಿರ್ಧಾರ ಮಾಡುವರು. ಪಾಲ್ಗೊಳ್ಳುವವರು ಕೈಮಗ್ಗದ ಉತ್ಪನ್ನಗಳನ್ನು ಮಾತ್ರ ಮಾರಾಟ ಮಾಡಬೇಕು.

**ಪಾಲ್ಗೊಳ್ಳುವವರು :**

ಕೆಳಕಂಡ ಏಜೆನ್ಸಿಗಳು ಈ ಎಕ್ಸ್‌ಪೋಗಳಲ್ಲಿ ಪಾಲುಗೊಳ್ಳಲು ಅರ್ಹರಾಗಿರುತ್ತಾರೆ :

i) ಎಲ್ಲಾ ಮಟ್ಟದ ಕೈಮಗ್ಗದ ಅಪೆಕ್ಸ್ ಸಹಕಾರ ಸಂಘಗಳು, ನಿಗಮಗಳು/ಒಕ್ಕೂಟಗಳು ಮತ್ತು ಪ್ರಾಥಮಿಕ ಸಹಕಾರ ಸಂಘಗಳು

ii) ಕೈಮಗ್ಗ ಚಟುವಟಿಕೆಗಳಲ್ಲಿ ನಿರತವಾಗಿರುವ ಹಾಗೂ ಸಿಎಪಿಎಆರ್‌ಟಿ (ಕಪಾರ್ಟ್) ನಿಗದಿಪಡಿಸಲಾದ ಎಲ್ಲ ನಿಯಮಗಳಿಗೆ ಅನುಗುಣವಾಗಿರುವ ಸರ್ಕಾರೇತರ ಸಂಸ್ಥೆಗಳು

iii) ಕೈಮಗ್ಗ ಉತ್ಪದನೆಯಲ್ಲಿ ತೊಡಗಿರುವ ಸ್ವಸಹಾಯ ನೆರವು ಗುಂಪುಗಳು

ಪ್ರತಿ ಎಕ್ಸ್‌ಪೋನಲ್ಲಿ ಭಾಗವಹಿಸುವವರ ಸಂಖ್ಯೆಯನ್ನು ನಿಗದಿಪಡಿಸುವ ಅಧಿಕಾರವು ಅಭಿವೃದ್ಧಿ ಆಯುಕ್ತ (ಕೈಮಗ್ಗ)ರಿಗಿರುವುದು.

**ಅನುಷ್ಠಾನ ಏಜೆನ್ಸಿಗಳು :** ರಾಷ್ಟ್ರೀಯ ಕೈಮಗ್ಗ ಸಂಘಟನೆಗಳಾದ ಎನ್‌ಹೆಚ್‌ಡಿಸಿ, ಎಸಿಎವಿಎಸ್‌ಹೆಚ್‌ಗಳು, ರಾಜ್ಯಸರ್ಕಾರಗಳು ನೇರವಾಗಿ ಅಥವಾ ರಾಜ್ಯಮಟ್ಟದ ಕೈಮಗ್ಗ ಏಜೆನ್ಸಿ/ಒಕ್ಕೂಟ ಮತ್ತು ನೇಕಾರರ ಸೇವಾಕೇಂದ್ರಗಳ ಮೂಲಕ ರಾಷ್ಟ್ರೀಯ ಹ್ಯಾಂಡ್‌ಲೂಮ್ ಎಕ್ಸ್‌ಪೋಗಳು ಆಯೋಜಿಸಲ್ಪಡುತ್ತವೆ.

**ಆರ್ಥಿಕ ವ್ಯವಸ್ಥೆಯ ವಿನ್ಯಾಸ :** ಪಾಲುಗೊಳ್ಳುವವರಿಂದ ಮಾರಾಟಕ್ಕೆ ವೃದ್ಧಿಯುಂಟಾಗುವಂತೆ ಮಾಡಲು ಈ ಎಕ್ಸ್‌ಪೋಗಳಿಗೆ ಮೂಲಸೌಕರ್ಯಗಳ ನೆರವು, ಮಳಿಗೆಗಳ ಬಾಡಿಗೆ, ವಿದ್ಯುತ್‌ವೆಚ್ಚಗಳು, ಪ್ರಚಾರ, ಬ್ಯಾಕಪ್ ಸೇವೆಗಳು, ಆಡಳಿತಾತ್ಮಕ ವೆಚ್ಚಗಳು ಮುಂತಾದ ವಿಧಗಳಲ್ಲಿ ಹಣಕಾಸು ನೆರವು ಮುಂದುವರಿಸಲು ನಿರ್ಧರಿಸಲಾಗಿದೆ. 15 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯುಳ್ಳ ನಗರಗಳಲ್ಲಿ ಸಂಘಟಿಸಲಾಗುವ ಕೈಮಗ್ಗದ ಎಕ್ಸ್‌ಪೋಗಳು ರೂ. 38 ಲಕ್ಷಗಳವರೆಗಿನ ನೆರವಿಗೆ ಅರ್ಹವಾಗಿದ್ದು, 15 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯ ನಗರಗಳಲ್ಲಿ ನಡೆಸಲಾಗುವ ಕೈಮಗ್ಗದ ಎಕ್ಸ್‌ಪೋಗಳಿಗೆ ರೂ. 18 ಲಕ್ಷಗಳವರೆಗಿನ ನೆರವು ನೀಡಲಾಗುವುದು. ಈ

ಮಿತಿಗಿಂತ ಅಧಿಕವಾಗುವ ವೆಚ್ಚಗಳನ್ನು ಅನುಷ್ಠಾನ ಏಜೆನ್ಸಿಗಳು ಭರಿಸಬೇಕು. ಹಣಕಾಸಿನ ನೆರವು ಖರ್ಚುಗಳ ಮರುಪಾವತಿಯ ರೂಪದಲ್ಲಿದ್ದು ಇದನ್ನು ಪರಿಶಿಷ್ಟ–1 ರಲ್ಲಿ ನಿಗದಿ ಪಡಿಸಿರುವ ಮಾರ್ಗಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಸಲ್ಲಿಸಿ ಪಡೆದುಕೊಳ್ಳಬೇಕು. ಇದು ಕಾಲಕಾಲಕ್ಕೆ ಮಾರ್ಪಾಡಿಗೆ ಒಳಗಾಗುತ್ತದೆ. ಅಗತ್ಯ ಸಂದರ್ಭಗಳಲ್ಲಿ ಹಣದ ಲಭ್ಯತೆಗೆ ಒಳಪಟ್ಟು ಅರ್ಹ ಮೊತ್ತದ 50% ವರೆಗಿನ ಮೊತ್ತದ ಮುಂಗಡ ಪಡೆಯಬಹುದಾಗಿದೆ.

**ಎಕ್ಸ್‌ಪೋಗಳಲ್ಲಿ ನೇಕಾರರ ಸೇವಾಕೇಂದ್ರದ ಥೀಮ್ ಪೆವಿಲಿಯನ್:**

ಕೈಮಗ್ಗದ ಅಭಿವೃದ್ಧಿ ಆಯುಕ್ತರು ನಿರ್ಧರಿಸಿದಂತೆ, ನೇಕಾರರ ಸೇವಾ ಕೇಂದ್ರದ ನೆರವಿನೊಂದಿಗೆ ಅನುಷ್ಠಾನ ಏಜೆನ್ಸಿಯು 500–2500 ಚ.ಅಡಿ ವಿಸ್ತೀರ್ಣದ ಥೀಮ್ ಪೆವಿಲಿಯನ್ ನಿರ್ಮಿಸಬಹುದು. ಪ್ರತಿ ಎಕ್ಸ್‌ಪೋಗಳಿಗೂ ಥೀಮ್ ಪೆವಿಲಿಯನ್ ನಿರ್ಮಾಣವನ್ನು, ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿಯಿಂದ ಸಾಕಷ್ಟು ಮುಂಚಿತವಾಗಿಯೇ ನಿಗದಿಪಡಿಸಲಾಗುವುದು. ಇದರ ಥೀಮ್ ಒಳಗೊಳ್ಳುವಂತೆ ತಮ್ಮ ಉತ್ಪನ್ನಗಳನ್ನು ರೂಪಿಸುವಂತೆ ಭಾಗವಹಿಸುವವರಿಗೆ ತಿಳಿಸಲಾಗುವುದು.

ನೇಕಾರರ ಸೇವಾ ಕೇಂದ್ರದ ಥೀಮ್ ಪೆವಿಲಿಯನ್‌ನ್ನು ಪ್ರಸ್ತುತಪಡಿಸುವುದನ್ನು ಸಂಬಂಧಿತ ನೇಕಾರರ ಸೇವಾ ಕೇಂದ್ರ ಅಥವಾ ಇನ್ನಿತರ ಸಂಘಟನೆಗಳಿಗೆ ವಹಿಸಲಾಗುವುದು. ಪೆವಿಲಿಯನ್ ಪ್ರದರ್ಶನದ ಸಂಬಂಧಿತ ವೆಚ್ಚಗಳಿಗಾಗಿ ಕೈಮಗ್ಗ ಅಭಿವೃದ್ಧಿ ಆಯುಕ್ತರ ಕಚೇರಿಯಿಂದ ಸಂಬಂಧಿತ ನೇಕಾರರ ಸೇವಾ ಕೇಂದ್ರಕ್ಕೆ ರೂ. 15,000/–ಗಳನ್ನು ನೀಡಲಾಗುತ್ತದೆ.

ರಾಷ್ಟ್ರೀಯ ಕೈಮಗ್ಗದ ಎಕ್ಸ್‌ಪೋ ಅನುಷ್ಠಾನದ ಏಜೆನ್ಸಿಯು ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿಯಿಂದ ಒದಗಿಸಲ್ಪಟ್ಟ ಹಣದ ಮಿತಿಯೊಳಗೆ ನೇಕಾರರ ಸೇವಾ ಕೇಂದ್ರದ ಥೀಮ್ ಪೆವಿಲಿಯನ್ ನಿರ್ಮಿಸುವ ಹೊಣೆಹೊಂದಿರುವುದು. ಇದಕ್ಕಾಗಿ ಹೆಚ್ಚುವರಿ ಹಣವನ್ನು ಅನುಷ್ಠಾನ ಏಜೆನ್ಸಿಗೆ ನೀಡಲಾಗುವುದಿಲ್ಲ.

**3.1.2. ವಿಶೇಷ ಎಕ್ಸ್‌ಪೋಗಳು**

ಮಾರುಕಟ್ಟೆಯ ಮಾರ್ಗಗಳನ್ನು ವೈವಿಧ್ಯಮಯಗೊಳಿಸುವ ಸಲುವಾಗಿ ರಾಷ್ಟ್ರೀಯ ಕೈಮಗ್ಗದ ಎಕ್ಸ್‌ಪೋಗಳಲ್ಲದೇ ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿಯು ವಿಶೇಷ ಎಕ್ಸ್‌ಪೋಗಳನ್ನು ಆಯೋಜಿಸುತ್ತಿದೆ. ಈ ವಿಶೇಷ ಎಕ್ಸ್‌ಪೋಗಳು ರಾಷ್ಟ್ರಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿರುತ್ತವೆ. ರಾಷ್ಟ್ರಮಟ್ಟದ ವಿಶೇಷ ಎಕ್ಸ್‌ಪೋಗಳು ಉಣ್ಣೆ, ರೇಷ್ಮೆ ಮುಂತಾದ ವಿಶೇಷ ನೂಲುಗಳಿಗಾಗಿ ಇರುತ್ತವೆ ಅಥವಾ ಸೀರೆಗಳು, ಗೃಹಾಲಂಕಾರ ವಿಶೇಷಗಳು ಮುಂತಾದ ವಿಶೇಷ ಉತ್ಪನ್ನಗಳಿಗೆ ಸಂಬಂಧಿಸಿರುತ್ತವೆ. ಪ್ರಾಂತೀಯ ಮಟ್ಟದ ವಿಶೇಷ ಎಕ್ಸ್‌ಪೋಗಳು ಒಂದು ನಿರ್ದಿಷ್ಟ ಪ್ರಾಂತ್ಯದ ಉತ್ಪನ್ನ ವಿಶೇಷಗಳಿಗೆ, ಅಂದರೆ, ಈಶಾನ್ಯ ರಾಜ್ಯಗಳ ವಿಶೇಷ ಎಕ್ಸ್‌ಪೋ, ದಕ್ಷಿಣ ದೇಶಗಳ ಹತ್ತಿಯ ಕೈಮಗ್ಗ ವಸ್ತ್ರಗಳು, ಪೂರ್ವ ಪ್ರಾಂತ್ಯಗಳ ಹತ್ತಿ ಕೈಮಗ್ಗ ವಸ್ತ್ರಗಳು ಇತ್ಯಾದಿಗಳಿಗೆ ಸಂಬಂಧಿಸಿರುತ್ತವೆ. ಈ ವಿಶೇಷ ಎಕ್ಸ್‌ಪೋಗಳು ಎರಡರಿಂದ ಮೂರು ವಾರದ ಅವಧಿಗೆ ನಡೆಯುತ್ತವೆ. ಇದಲ್ಲದೇ ನವದೆಹಲಿಯ ಪ್ರಗತಿ ಮೈದಾನದಲ್ಲಿ ಪ್ರತಿವರ್ಷ ಐಟಿಪಿಓನಿಂದ ಆಯೋಜಿಸಲ್ಪಡುವ ಇಂಡಿಯಾ ಇಂಟರ್ ನ್ಯಾಷನಲ್ ಟ್ರೇಡ್ ಫೇರ್ ನಡೆಯುವ ಸಂದರ್ಭದಲ್ಲಿ ವಿಶೇಷ ಎಕ್ಸ್‌ಪೋವನ್ನು ಎಸಿಎಎಸ್‌ಹೆಚ್ (ಆಕಾಶ್) ಆಯೋಜಿಸುತ್ತದೆ.

**ಪಾಲ್ಗೊಳ್ಳುವವರು**

i) ಎಲ್ಲಾ ಮಟ್ಟಗಳ ಕೈಮಗ್ಗದ ಅಪೆಕ್ಸ್ ಸಹಕಾರಿ ಸಂಘಗಳು, ನಿಗಮಗಳು/ಒಕ್ಕೂಟಗಳು ಮತ್ತು ಪ್ರಾಥಮಿಕ ಸಹಕಾರಿ ಸಂಘಗಳು

ii) ಕೈಮಗ್ಗ ಕ್ಷೇತ್ರದಲ್ಲಿ ತೊಡಗಿಕೊಂಡಿದ್ದು ಸಿಎಪಿಎಆರ್‌ಟಿ (ಕಪಾರ್ಟ್) ನಿಯಮಗಳನ್ನು ಪಾಲಿಸುವ ಸರ್ಕಾರೇತರ ಸೇವಾ ಸಂಸ್ಥೆಗಳು.

iii) ಕೈಮಗ್ಗದ ಉತ್ಪಾದನೆಯಲ್ಲಿ ತೊಡಗಿರುವ ಸ್ವಸಹಾಯ ಗುಂಪುಗಳು

<u>ಅನುಷ್ಠಾನ ಏಜೆನ್ಸಿ</u> : ರಾಷ್ಟ್ರೀಯ ಮಟ್ಟದ ವಿಶೇಷ ಎಕ್ಸ್‌ಪೋಗಳನ್ನು ಎನ್‌ಹೆಚ್‌ಡಿಸಿ, ಎಸಿಎಎಸ್‌ಹೆಚ್ (ಆಕಾಶ್) ಮುಂತಾದ ರಾಷ್ಟ್ರೀಯ ಕೈಮಗ್ಗ ಸಂಘಟನೆಗಳು, ರಾಜ್ಯಸರ್ಕಾರ, ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮಗಳು ಮತ್ತು ರಾಜ್ಯ ಹ್ಯಾಂಡ್‌ಲೂಮ್ ಅಪೆಕ್ಸ್ ಸಹಕಾರ ಸಂಘಗಳು ಆಯೋಜಿಸಬಹುದು. ಪ್ರಾಂತೀಯ ಮಟ್ಟದ ವಿಶೇಷ ಎಕ್ಸ್‌ಪೋಗಳನ್ನು ಎನ್‌ಹೆಚ್‌ಡಿಸಿ, ಎಸಿಎಎಸ್‌ಹೆಚ್ (ಆಕಾಶ್) ಮುಂತಾದ ರಾಷ್ಟ್ರೀಯ ಕೈಮಗ್ಗ ಸಂಘಟನೆಗಳು ಸಂಘಟಿಸಬಹುದು. ರಾಜ್ಯಮಟ್ಟದ ವಿಶೇಷ ಕೈಮಗ್ಗದ ಎಕ್ಸ್‌ಪೋಗಳನ್ನು ರಾಜ್ಯ ಸರ್ಕಾರವು ನೇರವಾಗಿ ಅಥವಾ ರಾಜ್ಯಮಟ್ಟದ ಕೈಮಗ್ಗದ ನಿಗಮ/ಅಪೆಕ್ಸ್ ಸಹಕಾರಸಂಘ/ಒಕ್ಕೂಟಗಳಿಂದ ಸಂಘಟಿಸಲ್ಪಡಬಹುದು.

**ಹಣಕಾಸು ನೆರವಿನ ಬಗೆ :** ರಾಷ್ಟ್ರೀಯ ಮಟ್ಟದ ವಿಶೇಷ ಎಕ್ಸ್‌ಪೋಗಳಿಗೆ ಹಣಕಾಸಿನ ನೆರವು ರೂ. 20.00 ಲಕ್ಷದ ಮಿತಿಗೊಳಪಟ್ಟಿದ್ದು, ಇದು ಮಳಿಗೆಗಳ ಬಾಡಿಗೆ, ಮೂಲಭೂತ ಸೌಕರ್ಯ ಮತ್ತು ಪ್ರಚಾರಗಳಿಗೆ ಸಂಬಂಧಿಸಿರುತ್ತದೆ. ಪ್ರಾಂತೀಯ ಮಟ್ಟದ ವಿಶೇಷ ಎಕ್ಸ್‌ಪೋಗಳಿಗೆ ಹಣಕಾಸಿನ ನೆರವು ರೂ. 10.00 ಲಕ್ಷಗಳ ಮಿತಿಗೊಳಪಟ್ಟಿದ್ದು, ಇದು ಮಳಿಗೆಗಳ ಬಾಡಿಗೆ, ಮೂಲಭೂತ ಸೌಕರ್ಯ ಮತ್ತು ಪ್ರಚಾರಗಳಿಗೆ ಸಂಬಂಧಿಸಿದೆ. ರಾಜ್ಯಮಟ್ಟದ ವಿಶೇಷ ಎಕ್ಸ್‌ಪೋಗಳಿಗಾಗಿ ಮಳಿಗೆಗಳ ಬಾಡಿಗೆ, ಮೂಲಭೂತ ಸೌಕರ್ಯಗಳಿಗಾಗಿ ಹಣಕಾಸಿನ ನೆರವು ರೂ. 8.00ಲಕ್ಷಗಳ ಮಿತಿಗೊಳಪಟ್ಟಿದೆ. ಆದಾಗ್ಯೂ, ರಾಜ್ಯಮಟ್ಟದ ವಿಶೇಷ ಎಕ್ಸ್‌ಪೋಗಳಿಗಾಗಿ ಉತ್ತರದ ರಾಜ್ಯಗಳಿಗೆ ಹಣಕಾಸು ನೆರವು, ಅಲ್ಲಿನ ದುರ್ಗಮ ಭೂಪ್ರದೇಶಗಳಿಂದಾಗಿ, ಮಳಿಗೆಗಳ ಬಾಡಿಗೆ, ಮೂಲ ಸೌಕರ್ಯ ಮತ್ತು ಪ್ರಚಾರಗಳಿಗಾಗಿ ರೂ. 10.00 ಲಕ್ಷಗಳಾಗಿದೆ. ಮೇಲ್ಕಂಡ ಮೊತ್ತ ಅಥವಾ ನೈಜ ವೆಚ್ಚಗಳ ಪೈಕಿ ಯಾವುದು ಕಡಿಮೆಯೋ ಅದನ್ನು ಪಾವತಿಸಲಾಗುತ್ತದೆ.

ಈ ಉಪಾಂಗದ ಅನುಷ್ಠಾನದ ವಿಸ್ತೃತ ಮಾರ್ಗಸೂಚಿ ಮತ್ತು ಹಣಕಾಸು ನೆರವಿನ ಮಾನದಂಡಗಳು **<u>ಪರಿಶಿಷ್ಟ –II</u>** ರಲ್ಲಿ ಲಭ್ಯವಿವೆ.

**3.1.3. ಜಿಲ್ಲಾಮಟ್ಟದ ಈವೆಂಟ್‌ಗಳು (ಡಿ.ಎಲ್.ಇ.)**

ಅಭಿವೃದ್ಧಿ ಆಯುಕ್ತ (ಕೈಮಗ್ಗ)ರ ಕಚೇರಿಯು 1996–97ರಿಂದ ಜಿಲ್ಲಾ ಮಟ್ಟದ ನೆಲೆಗಟ್ಟಿನ ಈವೆಂಟ್‌ಗಳು (ಮೇಳ) ಉತ್ಸವಗಳ ಮೂಲಕ ಕೈಮಗ್ಗದ ಉತ್ಪನ್ನಗಳ ಮಾರಾಟ ಪ್ರೋತ್ಸಾಹಿಸುತ್ತದೆ. ಇದರ ಜನಪ್ರಿಯತೆ ಮತ್ತು ಅನುಕೂಲಗಳನ್ನು ಗಮನಿಸಿ, ಇದನ್ನು 11ನೇ ಯೋಜನೆಯಲ್ಲಿಯೂ ಮುಂದುವರಿಸಲಾಗುವುದು.

ಅಭಿವೃದ್ಧಿ ಆಯುಕ್ತ (ಕೈಮಗ್ಗ)ರು ಪ್ರತಿವರ್ಷ ಜಿಲ್ಲಾ ಮಟ್ಟದ ಈವೆಂಟ್‌ಗಳ ಸಂಖ್ಯೆ, ಸ್ಥಳ ಹಾಗೂ ಕಾಲಾವದಿಗಳನ್ನು, ರಾಜ್ಯದಿಂದ ಬಂದ ಮನವಿಗಳು, ತಾಣದ ಮಾರಾಟದ ಸಂಭವನೀಯತೆ, ಹಣಕಾಸಿನ ಲಭ್ಯತೆ, ರಾಷ್ಟ್ರೀಯ ಕೈಮಗ್ಗ ಎಕ್ಸ್‌ಪೋಗಳು ಮುಂತಾದವುಗಳನ್ನಾಧರಿಸಿ ನಿರ್ಧರಿಸುವರು. ಭಾಗವಹಿಸುವವರು ಕೈಮಗ್ಗ ಉತ್ಪನ್ನಗಳನ್ನು ಮಾತ್ರ ಮಾರಾಟ ಮಾಡಬೇಕು. ಜಿಲ್ಲಾ ಮಟ್ಟದ ಈವೆಂಟ್‌ಗಳನ್ನು ಶಾಧ್ಯವಾದ ಮಟ್ಟಿಗೆ ಇತರ ರಾಜ್ಯಗಳೊಂದಿಗೆ ಪರಸ್ಪರ ಪಾಲುಗೊಳ್ಳುವಿಕೆಯ ಆಧಾರದ ಮೇಲೆ ಸಹ ನಡೆಸಬಹುದು.

**ಭಾಗವಹಿಸುವವರು :**

ಕೆಳಕಂಡ ಏಜೆನ್ಸಿಗಳು/ವ್ಯಕ್ತಿಗಳು ಜಿಲ್ಲಾ ಮಟ್ಟದ ಈವೆಂಟ್‌ಗಳಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

* ಕೈಮಗ್ಗ ನೇಕಾರರು

* ಪ್ರಾಥಮಿಕ ಕೈಮಗ್ಗ ನೇಕಾರರ ಸಹಕಾರ ಸಂಘಗಳು

**ಅನುಷ್ಠಾನ ಏಜೆನ್ಸಿಗಳು :**

ಜಿಲ್ಲಾಮಟ್ಟದ ಈವೆಂಟ್‌ಗಳನ್ನು ಕೆಳಕಂಡ ಅನುಷ್ಠಾನ ಏಜೆನ್ಸಿಗಳು ಸಂಘಟಿಸಬಹುದು.

* ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಕೈಮಗ್ಗ ಮತ್ತು ಜವಳಿ ನಿರ್ದೇಶಕರು

* ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮಗಳು

* ರಾಜ್ಯ ಮಟ್ಟದ ಕೈಮಗ್ಗ ಸಹಕಾರಿ ಒಕ್ಕೂಟಗಳು/ಅಪೆಕ್ಸ್ ಸಂಘಗಳು

* ಜಿಲ್ಲಾ ಗ್ರಾಮೀಣಾಭಿವೃದ್ಧಿ ಏಜೆನ್ಸಿಗಳು

* ನೇಕಾರರ ಸೇವಾ ಕೇಂದ್ರಗಳು

* ಸಂಯೋಜಿತ ಕೈಮಗ್ಗ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೈಮಗ್ಗ ಸಮೂಹಾಭಿವೃದ್ಧಿ ಕಾರ್ಯಕ್ರಮದ ಅಂತರ್ಗತ ಆಯ್ಕೆಯಾದ ಕೈಮಗ್ಗ ಸಮೂಹಗಳ ಅನುಷ್ಠಾನ ಏಜೆನ್ಸಿಗಳು

**ಹಣಕಾಸಿನ ನೆರವಿನ ಬಗೆ :**

ಪ್ರತಿಯೊಂದು ಜಿಲ್ಲಾಮಟ್ಟದ ಈವೆಂಟ್‌ಗಳ ಮೂಲಭೂತಸೌಕರ್ಯಕ್ಕಾಗಿ ರೂ. 1.5ಲಕ್ಷಗಳು ಮತ್ತು ಪ್ರಚಾರವೆಚ್ಚಗಳಿಗಾಗಿ ರೂ. 50,000/–ಗಳ ಆರ್ಥಿಕ ನೆರವಿಗೆ ಅರ್ಹವಾಗಿವೆ. ಅಗತ್ಯವಿದ್ದಲ್ಲಿ ಅರ್ಹಮೊತ್ತದ 50%ವರೆಗಿನ ಮೊತ್ತದ ಮುಂಗಡ ಬಿಡುಗಡೆ ಮಾಡಬಹುದಾಗಿದ್ದು ಉಳಿದ 50% ಅಥವಾ ವಾಸ್ತವಿಕ ವೆಚ್ಚಗಳ ಪೈಕಿ ಯಾವುದು ಕಡಿಮೆಯೋ ಅದನ್ನು ಈವೆಂಟ್ ಮುಕ್ತಾಯಗೊಂಡನಂತರ ಕೈಮಗ್ಗಗಳ ರಾಜ್ಯ ಪ್ರಭಾರ ನಿರ್ದೇಶಕರು, ಇವರ ಮೂಲಕ ಪರಿಶೋಧಿತ ಲೆಕ್ಕಪತ್ರಗಳನ್ನು ಸಲ್ಲಿಸಿ ಮರುಪಾವತಿ ಪಡೆಯಬಹುದು. ಹಣಕಾಸಿನ ನೆರವುಗಳನ್ನು ಸ್ಥಳದ ಬಾಡಿಗೆ, ಪ್ರದರ್ಶನ/ಅಲಂಕರಣ, ಸಾಗಾಣಿಕೆ, ವಿದ್ಯುತ್, ನೀರು ಮತ್ತು ಪ್ರಚಾರ ವೆಚ್ಚಗಳಿಗಾಗಿ ನೀಡಲಾಗುವುದು. ಪಾವತಿಗಾಗಿ ಅಂತಿಮ ಕ್ಲೇಮ್‌ಗಾಗಿ ಸ್ಥಳದ ಬಾಡಿಗೆ ರಸೀದಿ, ನಿರ್ಮಾಣ ಮುಂತಾದವುಗಳ ವೆಚ್ಚಗಳ ರಸೀದಿಗಳನ್ನು ನೀಡುವುದು ಅಗತ್ಯ.

ಇದರಲ್ಲಿ ಕ್ಷೇತ್ರ ಪರಿಶೀಲನೆ ನಡೆಸಲು ನಾಮಾಂಕಿತವಾದ ನೇಕಾರರ ಸೇವಾಕೇಂದ್ರಕ್ಕೆ ರೂ. 2500/–ಗಳನ್ನು ನೀಡಲಾಗುವುದು. ಈ ಉಪಾಂಗದ ಅನುಷ್ಠಾನದ ವಿಸ್ತೃತ ಮಾರ್ಗ ಸೂಚಿಗಳು ಮತ್ತು ಹಣಕಾಸು ನೆರವಿನ ಮಾನದಂಡಗಳು ಪರಿಶಿಷ್ಟ–ಖಖಖ ರಲ್ಲಿ ಲಭ್ಯವಿವೆ.

**<u>3.1.4. ಕರಕುಶಲ ಮೇಳಗಳು</u>** :

ಕರಕುಶಲ ಮೇಳಗಳನ್ನು ಆಯೋಜಿಸುವಿಕೆಯು ಅಭಿವೃದ್ಧಿ ಆಯುಕ್ತರು (ಕೈಮಗ್ಗ) ಮತ್ತು ಅಭಿವೃದ್ಧಿ ಆಯುಕ್ತರು (ಕರಕುಶಲಕಲೆ) ಇವರುಗಳ ಕಚೇರಿಗಳ ಜಂಟಿ ಜವಾಬ್ದಾರಿಯಾಗಿದೆ. ಈ ಉಪಾಂಗದ ಅಡಿಯಲ್ಲಿ ಕೈಮಗ್ಗದ ನೇಕಾರರಿಗೆ ಕೆಳಕಂಡ ಮೇಳಗಳಲ್ಲಿ ಪಾಲ್ಗೊಳ್ಳುವಿಕೆಗಾಗಿ ಪ್ರಾಯೋಜಿಸಲಾಗುವುದು: ಫರೀದಾಬಾದ್‌ನ ಸೂರಜ್‌ಕುಂಡ್ ಮೇಳ (ಹರ್ಯಾಣ), ಉದಯಪುರ (ರಾಜಸ್ಥಾನ)ದ ಶಿಲ್ಪಗ್ರಾಮ, ಆಗ್ರಾದ ತಾಜ್ ಮಹೋತ್ಸವ (ಆಗ್ರಾ ಉ.ಪ್ರ.), ಮಾಧೋಪುರದ ಶಿಲ್ಪಾರಾಮಂ, ಹೈದರಾಬಾದ್(ಆಂಧ್ರ ಪ್ರದೇಶ), ಪಾಟಿಯಾಲಾ ಪರಂಪರಾ ಉತ್ಸವ, ಪಾಟಿಯಾಲಾ (ಪಂಜಾಬ್), ಕ್ಷೇತ್ರೀಯ ಕರಕುಶಲಮೇಳ, ಭುವನೇಶ್ವರ, ಒರಿಸ್ಸಾ ಮತ್ತು ಕ್ಷೇತ್ರೀಯ ಕರಕುಶಲ ಮೇಳ, ಮುಂಬೈ ಇತ್ಯಾದಿ.

ಅಗತ್ಯವೆಂದು ಕಂಡುಬಂದಲ್ಲಿ ಕೇಂದ್ರ ಪ್ರವಾಸೋದ್ಯಮ ಸಚಿವಾಲಯದೊಂದಿಗೆ ಚರ್ಚಿಸಿ ಹೊಸ ಕರಕುಶಲ ಮೇಳಗಳನ್ನು ಈ ಪಟ್ಟಿಗೆ ಸೇರಿಸಬಹುದು. ಕೈಮಗ್ಗ ಮತ್ತು ಕರಕುಶಲ ಉತ್ಪನ್ನಗಳ ಮಾರಾಟಗಳನ್ನು ಪ್ರೋತ್ಸಾಹಿಸುವುದೇ ಈ ಮೇಳಗಳ ಉದ್ದೇಶ. ಮೇಲ್ಕಂಡ ಮೇಳಗಳು ವಾರ್ಷಿಕ ಆಚರಣೆಗಳಾಗಿವೆ. ಈ ಮೇಳಗಳು ನೇಕಾರರು ಮತ್ತು ಕರಕುಶಲಕಲೆಗಾರರಿಗೆ ತಮ್ಮ ಪರಂಪರಾಗತ ಕೌಶಲ್ಯಗಳನ್ನು ತೋರಿ ಅವುಗಳ ಆಕರ್ಷಕ ವಿನ್ಯಾಸಗಳನ್ನು ಗ್ರಾಹಕರಿಗೆ ನೀಡಲು ಅವಕಾಶ ಕಲ್ಪಿಸುತ್ತವೆ.

ಈ ಮೇಳಗಳಿಂದಾಗಿ ನೇಕಾರರಿಗೆ ಮಾರುಕಟ್ಟೆಯ ಬೇಡಿಕೆ ಗ್ರಾಹಕರ ಅಭಿರುಚಿಗಳ ಪರಿಚಯ ಉಂಟಾಗುತ್ತದೆಯಲ್ಲದೇ ಸಂದರ್ಶಕರಿಗೆ ಮಾರುಕಟ್ಟೆಯಲ್ಲಿ ಲಭ್ಯವಿರುವ ಕೈಮಗ್ಗ ಮತ್ತು ಕರಕುಶಲ ಉತ್ಪನ್ನಗಳ ವಿಶಾಲ ಶ್ರೇಣಿಯ ಪರಿಚಯವೂ ದೊರಕುತ್ತದೆ. ಕರಕುಶಲ ಮೇಳಗಳಲ್ಲಿ ಪಾಲ್ಗೊಳ್ಳಲು ನೇಕಾರರ ಆಯ್ಕೆಗಾಗಿ ವಿಸ್ತೃತ ಮಾರ್ಗಸೂಚಿಗಳನ್ನು ಪರಿಶಿಷ್ಟ–ಊ ರಲ್ಲಿ ನೀಡಲಾಗಿದೆ.

**ಭಾಗವಹಿಸುವವರು :**

ರಾಷ್ಟ್ರೀಯ ಪ್ರಶಸ್ತಿ, ಅರ್ಹತಾ ಪ್ರಮಾಣ ಪತ್ರಗಳನ್ನು ಪಡೆದವರು, ರಾಜ್ಯ ಪ್ರಶಸ್ತಿ ವಿಜೇತರಿಗೆ ಆದ್ಯತೆ. ಇತರ ನೇಕಾರರೂ ಪಾಲುಗೊಳ್ಳಬಹುದು.

**ಅನುಷ್ಠಾನ ಏಜೆನ್ಸಿ :** ಕರಕುಶಲ ಮೇಳಗಳನ್ನು ಆಯೋಜಿಸುವ ಅನುಷ್ಠಾನ ಏಜೆನ್ಸಿಗಳು ರಾಜ್ಯ ಸರ್ಕಾರದ ಅಧಿಕೃತ ಏಜೆನ್ಸಿಗಳಾಗಿದ್ದು, ಕೆಳಕಂಡ ಅನುಷ್ಠಾನ ಏಜೆನ್ಸಿಗಳು ಕರಕುಶಲ ಮೇಳಗಳನ್ನು ಆಯೋಜಿಸುತ್ತಿವೆ.

| | | | |
|---|---|---|---|
| i) | ಸೂರಜ್‌ಕುಂಡಮೇಳ | : | ಸೂರಜ್‌ಕುಂಡ ಮೇಳಾ ಪ್ರಾಧಿಕಾರ, ಹರ್‍ಯಾಣ ಸರ್ಕಾರ |
| ii) | ಶಿಲ್ಪಗ್ರಾಮ | : | ಶಿಲ್ಪಗ್ರಾಮ ಮೇಳಾ ಪ್ರಾಧಿಕಾರ, ಪಶ್ಚಿಮ ವಲಯ ಸಾಂಸ್ಕೃತಿಕ ಕೇಂದ್ರ, ಸಾಂಸ್ಕೃತಿಕ ಇಲಾಖೆ, ರಾಜಾಸ್ತಾನ ಸರ್ಕಾರ |
| iii) | ಶಿಲ್ಪಾರಾಮಮ್ | : | ಅಧಿಕೃತ ಏಜೆನ್ಸಿ, ಆಂದ್ರ ಪ್ರದೇಶ ಸರ್ಕಾರ |
| iv) | ತಾಜ್ ಮಹೋತ್ಸವ | : | ಅಧಿಕೃತ ಏಜೆನ್ಸಿ, ಪ್ರವಾಸೋದ್ಯಮ ಇಲಾಖೆ, ಉತ್ತರ ಪ್ರದೇಶ ಸರ್ಕಾರ |
| v) | ಪಾಟಿಯಾಲಾ ಪರಂಪರೆ ಉತ್ಸವ | : | ಪ್ರವಾಸೋದ್ಯಮ ಇಲಾಖೆ, ಚಂಡೀಘಡ, ಪಂಜಾಬ್ |
| vi) | ಕ್ಷೇತ್ರೀಯ ಕರಕುಶಲ ಮೇಳ, ಭುವನೇಶ್ವರ | : | ಅಧಿಕೃತ ಏಜೆನ್ಸಿ, ಒರಿಸ್ಸಾ ಸರ್ಕಾರ |
| vii) | ಕ್ಷೇತ್ರೀಯ ಕರಕುಶಲ ಮೇಳ ಮುಂಬೈ | : | ಅಧಿಕೃತ ಏಜೆನ್ಸಿ, ಮಹಾರಾಷ್ಟ್ರ ಸರ್ಕಾರ |
| viii) | ಕ್ಷೇತ್ರೀಯ ಕರಕುಶಲ ಮೇಳ ಗ್ವಾಲಿಯರ್ | : | ಅಧಿಕೃತ ಏಜೆನ್ಸಿ, ಮಧ್ಯ ಪ್ರದೇಶ ಸರ್ಕಾರ |

**ಹಣಕಾಸು ನೆರವಿನ ಬಗೆ :** ಪ್ರತಿ ಅನುಷ್ಠಾನ ಏಜೆನ್ಸಿಗೂ ಕರಕುಶಲ ಮೇಳಕ್ಕೆ ಸಂಬಂಧಿಸಿದಂತೆ ಮೂಲಭೂತ ಸೌಕರ್ಯ ಮತ್ತು ಪ್ರಚಾರ ವೆಚ್ಚಗಳ ವಾಸ್ತವ ಮೊತ್ತವನ್ನು ರೂ. 10.00 ಲಕ್ಷಗಳ ಮಿತಿಯೊಳಗೆ ನೀಡಲಾಗುವುದು. ಸ್ವೀಕಾರಾರ್ಹ ಖರ್ಚುಗಳ ಬಾಬ್ತುಗಳು ಮೇಳ ಪ್ರದೇಶದಲ್ಲಿ ಮಳಿಗೆಗಳಿಗೆ ತಾತ್ಕಾಲಿಕ/ಖಾಯಂ ನಿರ್ಮಿತಿಗಳು, ನೇಕಾರರಿಗಾಗಿ ಸೌಲಭ್ಯಗಳು, ಮೇಳ ನಿರ್ವಹಣೆಗಾಗಿ ನೀರು, ವಿದ್ಯುತ್ ವೆಚ್ಚ ಮತ್ತು ಪ್ರಾಸಂಗಿಕ ವೆಚ್ಚಗಳು ಮುಂತಾದವುಗಳನ್ನು ಒಳಗೊಂಡಿವೆ. ಪ್ರಚಾರ ವೆಚ್ಚಗಳಲ್ಲಿ ಜಾಹೀರಾತು, ಭಿತ್ತಿಪತ್ರಗಳು, ಮುದ್ರಣ, ಕರಪತ್ರಗಳು ಮುಂತಾದವನ್ನು ಒಳಗೊಂಡಿವೆ. 50% ವರೆಗಿನ ಮುಂಗಡ ಬಿಡುಗಡೆ ಮಾಡಲು ಅವಕಾಶವಿದೆ.

**3.2 ಅರ್ಬನ್ ಹಾತ್‌ಗಳು**

ದಿಲ್ಲಿ ಹಾತ್ ವಿನ್ಯಾಸದಲ್ಲಿ ಕೈಮಗ್ಗ ನೇಕಾರರು/ಕರಕುಶಲ ಕಲೆಗಾರರಿಗೆ ದೇಶದ ಪ್ರಮುಖ ಸ್ಥಳಗಳಲ್ಲಿ ಮಾರಾಟಕ್ಕೆ ಅನುಕೂಲ ಮಾಡಿಕೊಡುವ ಸಲುವಾಗಿ ಖಾಯಂ ಮಾರಾಟ ಮೂಲಭೂತ ಸೌಕರ್ಯಗಳನ್ನು ಒದಗಿಸಲು 1997–98 ರಿಂದ ಅರ್ಬನ್ ಹಾತ್‌ಗಳನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಗೆ ಅಭಿವೃದ್ಧಿ ಆಯುಕ್ತ (ಕೈಮಗ್ಗ)ರು ಮತ್ತು ಹಸ್ತಕಲಾ ಅಭಿವೃದ್ಧಿ ಆಯುಕ್ತರ ಕಚೇರಿಗಳ ಹಾಗೂ ರಾಜ್ಯ ಸರ್ಕಾರಗಳಿಂದ ಕ್ರಮವಾಗಿ 35% : 35% : 30% ಅನುಪಾತದಲ್ಲಿ ನೇರ ಹಣಕಾಸು ನೆರವು ಒದಗಿಸಲಾಗಿರುತ್ತದೆ.

ಈ ಉಪಾಂಗದಡಿಯಲ್ಲಿ ದೇಶದಲ್ಲಿನ ಪ್ರವಾಸೀ ಮತ್ತು ವ್ಯಾಪಾರಿ ಆಕರ್ಷಣೆಯ ಪ್ರಮುಖ ಸ್ಥಳಗಳಲ್ಲಿ ಅರ್ಬನ್ ಹಾತ್‌ಗಳನ್ನು ಸ್ಥಾಪಿಸಲಾಗುವುದು. ಇಲ್ಲಿ ಕರಕುಶಲಕರ್ಮಿಗಳು/ನೇಕಾರರು ಕೈಮಗ್ಗ/ಕರಕುಶಲ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡುವರು. ಇದರಿಂದ ಅವರುಗಳಿಗೆ ದಳ್ಳಾಳಿಗಳನ್ನು ದೂರವಿಟ್ಟು ನೇರವಾಗಿ ಮಾರಾಟ ಮಾಡಲು ಅವಕಾಶ ದೊರಕುತ್ತದೆ. ಇಲ್ಲಿ ದೇಶದ ವಿವಿಧಭಾಗಗಳ ಖಾದ್ಯಪದಾರ್ಥಗಳ ಸ್ಟಾಲ್‌ಗಳೂ ಇರುವುದು ಹಾತ್‌ಗಳ ಆಕರ್ಷಣೆ. ಈ ಖಾದ್ಯ ಮತ್ತು ಕರಕುಶಲ ಕಲಾ ಬಜಾರುಗಳು ಬಿಡುವಿನ ಮತ್ತು ಮನರಂಜನಾ ಸೌಲಭ್ಯಗಳನ್ನು ದಿಲ್ಲಿ ಹಾತ್ ರೀತಿಯಲ್ಲಿ ಸ್ಥಳೀಯ ಮತ್ತು ವಿದೇಶಿ ಪ್ರವಾಸಿಗರಿಗೆ ಒದಗಿಸುತ್ತವೆ. ಇದು ಕೇವಲ ಮೂರು ವರ್ಷಗಳಲ್ಲಿಯೇ ಅಂತರರಾಷ್ಟ್ರೀಯ ಸ್ಥಾನಮಾನಗಳಿಸಿಕೊಂಡಿದೆ. ಅರ್ಬನ್ ಹಾತ್‌ಗಳ ವಿನ್ಯಾಸದ ಮಾನದಂಡಗಳು ಹಾಗೂ ಹಣಕಾಸು ನೆರವಿನ ಮಟ್ಟಗಳನ್ನು ಒಳಗೊಂಡ ಮಾರ್ಗಸೂಚಿಗಳು ಪರಿಶಿಷ್ಟ –V ರಲ್ಲಿ ನೀಡಲ್ಪಟ್ಟಿವೆ.

**ಅರ್ಬನ್ ಹಾತ್ ಸ್ಥಾಪನೆಗೆ ಯೋಜನೆಗಳ ಆಯ್ಕೆ :** ಅರ್ಬನ್ ಹಾತ್‌ಗಳ ಸ್ಥಾಪನೆಯ ಪ್ರಸ್ತಾವನೆಗಳನ್ನು ಗವರ್ನಿಂಗ್ ಕೌನ್ಸಿಲ್‌ನಿಂದ ಪರಿಶೀಲಿಸಲ್ಪಡುತ್ತವೆ. ಅವು ಕೆಳಕಂಡಂತಿವೆ

i) ಅಭಿವೃದ್ಧಿ ಆಯುಕ್ತರು (ಕೈಮಗ್ಗ) –ಅಧ್ಯಕ್ಷರು
ii) ಅಭಿವೃದ್ಧಿ ಆಯುಕ್ತರು (ಹಸ್ತಕಲೆ) –ಸದಸ್ಯರು
iii) ಉಪಕಾರ್ಯದರ್ಶಿ/ನಿರ್ದೇಶಕ (ಐಎಫ್‌ಡಬ್ಲ್ಯು) –ಸದಸ್ಯರು
ಜವಳಿ ಸಚಿವಾಲಯ

ಇದಲ್ಲದೇ ನೀತಿಯ ರಚನೆ ಮತ್ತು ನಗರ ಪ್ರದೇಶ ಹಾತ್‌ಗಳ ಒಟ್ಟಾರೆ ನಿಯಂತ್ರಣವು ಸರ್ಕಾರದ ಸಂಸ್ಥೆಯೊಂದಿಗಿರುವುದು. ನಗರ ಪ್ರದೇಶ ಹಾತ್‌ಗಳು ಮಂಜೂರಾಗಿರುವ ಪ್ರತಿಯೊಂದು ರಾಜ್ಯದ ಸರ್ಕಾರವೂ, ಕೆಳಕಂಡ ಸದಸ್ಯರನ್ನು ಒಳಗೊಂಡ ಸರ್ಕಾರಿ ನಿಕಾಯವನ್ನು ರಚನೆ ಮಾಡಿ ಅಧಿಸೂಚನೆ ಹೊರಡಿಸುವುದು ಹಾಗೂ ಇದು ಹಾತ್‌ನ ನೀತಿಗಳ ರಚನೆ ಮತ್ತು ಒಟ್ಟಾರೆ ನಿರ್ವಹಣೆಯ ಹೊಣೆ ಹೊಂದಿರುವುದು.

i) ಕೈಮಗ್ಗ/ಹಸ್ತಕಲೆ ಉಸ್ತುವಾರಿ ಹೊಂದಿರುವ ರಾಜ್ಯ ಸರ್ಕಾರದ ಕಾರ್ಯದರ್ಶಿ – ಅಧ್ಯಕ್ಷರು

ii) ಪ್ರವಾಸೋದ್ಯಮದ ಉಸ್ತುವಾರಿ ಹೊಂದಿರುವ ರಾಜ್ಯ ಸರ್ಕಾರದ ಕಾರ್ಯದರ್ಶಿ – ಸದಸ್ಯರು

iii) ರಾಜ್ಯ ಸರ್ಕಾರದ ಕೈಮಗ್ಗ/ಹಸ್ತಕಲೆ ನಿರ್ದೇಶಕರು – ಸದಸ್ಯರು

iv) ಅಭಿವೃದ್ಧಿ ಆಯುಕ್ತ (ಕೈಮಗ್ಗ)ರ ಪ್ರತಿನಿಧಿ, ಜವಳಿ ಸಚಿವಾಲಯ – ಸದಸ್ಯರು

v) ಅಭಿವೃದ್ಧಿ ಆಯುಕ್ತ(ಹಸ್ತಕಲೆ)ರ ಪ್ರತಿನಿಧಿ, ಜವಳಿ ಸಚಿವಾಲಯ – ಸದಸ್ಯರು

vi) ರಾಜ್ಯಸರ್ಕಾರದ ಆರ್ಥಿಕ ಇಲಾಖೆಯ ಪ್ರತಿನಿಧಿ – ಸದಸ್ಯರು

**ಅನುಷ್ಠಾನ ಏಜೆನ್ಸಿ :** ಯೋಜನೆಯನ್ನು ರಾಜ್ಯ ಕೈಮಗ್ಗ/ಹಸ್ತಕಲಾ ಅಭಿವೃದ್ಧಿ ನಿಗಮಗಳು/ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಗಳು, ಯೋಜನೆಯ ಜಾರಿಗಾಗಿ ಸಾಕಷ್ಟು ಆರ್ಥಿಕ ಸಂಪನ್ಮೂಲ ಮತ್ತು ಸಂಘಟನಾ ಸಾಮರ್ಥ್ಯಗಳೊಂದಿಗೆ ಜಾರಿಗೊಳಿಸುತ್ತವೆ.

**ಹಣಕಾಸು ನೆರವಿನ ಬಗೆ :** ಯೋಜನೆಯ ಹೂಡಿಕೆಯ ವೆಚ್ಚವು ಸುಮಾರು ರೂ. 300.00 ಲಕ್ಷಗಳೆಂದು ಅಂದಾಜು ಮಾಡಲಾಗಿದ್ದು ಇದನ್ನು ಕೆಳಕಂಡಂತೆ ನೀಡಲಾಗುವುದು.

| | | |
|---|---|---|
| ಜವಳಿ ಸಚಿವಾಲಯ, ಭಾರತ ಸರ್ಕಾರ | 70% | ರೂ. 210.00 ಲಕ್ಷಗಳನ್ನು ಅಭಿವೃದ್ಧಿ ಆಯುಕ್ತರು(ಕೈಮಗ್ಗ) ಮತ್ತು ಅಭಿವೃದ್ಧಿ ಆಯುಕ್ತರು (ಹಸ್ತಕಲೆ) ಕಚೇರಿಗಳು ಸಮನಾಗಿ ಹಂಚಿಕೊಳ್ಳುವರು |
| ರಾಜ್ಯ ಸರ್ಕಾರದ ಏಜೆನ್ಸಿ | 30% | ರೂ. 90.00 ಲಕ್ಷ |

ಕೇಂದ್ರದ ನೆರವು ಪ್ರತಿ ಅರ್ಬನ್ ಹಾತ್‌ಗೆ ರೂ. 2.10 ಕೋಟಿಗಳಾಗಿ ನಿಶ್ಚಿತವಿದ್ದು, ವೆಚ್ಚದಲ್ಲಿನ ಯಾವುದೇ ಹೆಚ್ಚಳವನ್ನು ರಾಜ್ಯ ಸರ್ಕಾರ/ಅನುಷ್ಠಾನ ಏಜೆನ್ಸಿಯು ಭರಿಸಬೇಕು.

ಇದಲ್ಲದೇ, ಯೋಜನೆಯ ಪ್ರಚಾರಕ್ಕಾಗಿ ಕೇಂದ್ರ ಸರ್ಕಾರದಿಂದ ಮೊದಲ ವರ್ಷ ರೂ. 15.00ಲಕ್ಷ ಮತ್ತು ಎರಡನೆಯ ವರ್ಷ 10.00 ಲಕ್ಷಗಳನ್ನು ಕೊಡಮಾಡಲಾಗುವುದು.

ಯೋಜನೆಯ ಈ ಉಪಾಂಗವು ಕೈಮಗ್ಗ ನೇಕಾರರು/ಏಜೆನ್ಸಿಗಳಿಗೆ ಖಾಯಂ ಮಾರಾಟ ಮಳಿಗೆಗಳನ್ನು ಒದಗಿಸುವ ಸಲುವಾಗಿ ಮಾರುಕಟ್ಟೆ ಸಂಕೀರ್ಣಗಳನ್ನು ಸ್ಥಾಪಿಸಿ ನೆರವಾಗುವ ಉದ್ದೇಶ ಹೊಂದಿವೆ. ಈ ಉಪಾಂಗದ ಅಡಿಯಲ್ಲಿ ದೇಶದ ಪ್ರಮುಖ ನಗರ/ಪಟ್ಟಣಗಳಲ್ಲಿ 'ಒನ್ ಸ್ಟಾಪ್ ಷಾಪಿಂಗ್' ಪರಿಕಲ್ಪನೆಗೆ ಹೊಂದುವಂತೆ ಮಾರುಕಟ್ಟೆ ಸಂಕೀರ್ಣಗಳನ್ನು ಸ್ಥಾಪಿಸುವ ಉದ್ದೇಶವಿದೆ. ಇಲ್ಲಿ ಗ್ರಾಹಕರಿಗೆ ತಮ್ಮ ಆಯ್ಕೆಯ ನೈಜ ಕೈಮಗ್ಗ ಉತ್ಪನ್ನಗಳನ್ನು ನೇರವಾಗಿ ಖರೀದಿಸುವ ಅವಕಾಶವಿದೆ. ಇವುಗಳಿಗಾಗಿ ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿಯು ನಗರ/ಪಟ್ಟಣಗಳನ್ನು ಗುರುತಿಸುತ್ತದೆ. ಅನುಷ್ಠಾನ ಏಜೆನ್ಸಿಯು ಈ ಚಟುವಟಿಕೆಗಳಿಗಾಗಿ ನಗರ, ಪಟ್ಟಣಗಳಲ್ಲಿ ಸೂಕ್ತ ಪ್ರದೇಶಗಳನ್ನು ಗುರುತಿಸುತ್ತದೆ ಹಾಗೂ ಯೋಜನೆಯ ಪ್ರಕಾರ, ಅರ್ಹ ಕೈಮಗ್ಗ ಏಜೆನ್ಸಿಗಳ ಆಯ್ಕೆಯನ್ನು ಅಂತಿಮಗೊಳಿಸುವುದು.

ಈ ಉಪಾಂಗದಡಿಯಲ್ಲಿನ ಮಾರುಕಟ್ಟೆ ಸಂಕೀರ್ಣಗಳಲ್ಲಿ ಕೆಳಕಂಡ ಕೈಮಗ್ಗ ಏಜೆನ್ಸಿಗಳು ಭಾಗವಹಿಸಲು ಅರ್ಹರಾಗಿರುತ್ತಾರೆ.

i) ರಾಷ್ಟ್ರಮಟ್ಟದ ಕೈಮಗ್ಗ ಸಂಘಟನೆಗಳು
ii) ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮಗಳು
iii) ರಾಜ್ಯ ಕೈಮಗ್ಗ ಅಪೆಕ್ಸ್ ಸಹಕಾರ ಸಂಘಗಳು
iv) ಪ್ರಾಂತೀಯ/ಪ್ರಾಥಮಿಕ ಸಹಕಾರಿ ಕೈಮಗ್ಗ ಸಂಘ/ಒಕ್ಕೂಟಗಳು
v) ಕೈಮಗ್ಗ ರಫ್ತು ಪ್ರವರ್ತನಾ ಪರಿಷತ್ತು
vi) ಕೈಮಗ್ಗದ ಅಭಿವೃದ್ಧಿ ಆಯುಕ್ತರಿಂದ ಅನುಮೋದಿತವಾದ ಇನ್ನಾವುದೇ ಕೈಮಗ್ಗ ಏಜೆನ್ಸಿ/ಕೈಮಗ್ಗ ರಫ್ತುದಾರರು.

**ಮಾರುಕಟ್ಟೆ ಸಂಕೀರ್ಣದ ನಿರ್ವಹಣೆ :**

ಮಾರುಕಟ್ಟೆ ಸಂಕೀರ್ಣದ ನಿರ್ಮಾಣ/ಖರೀದಿಯ ನಂತರ ಅದರ ಆಡಳಿತವು, ಕೈಮಗ್ಗದ ಅಭಿವೃದ್ಧಿ ಆಯುಕ್ತರು ಹಾಗೂ ಭಾಗವಹಿಸುವ ಕೈಮಗ್ಗ ಏಜೆನ್ಸಿಗಳೊಂದಿಗೆ ಚರ್ಚಿಸಿ ಅನುಷ್ಠಾನ ಏಜೆನ್ಸಿಯು ರಚಿಸಿದ ಕಾರ್ಯಕಾರಿ ಸಮಿತಿಯ ಮೂಲಕ ನಿರ್ವಹಿಸಲ್ಪಡುವುದು. ಕೈಮಗ್ಗದ ಅಭಿವೃದ್ಧಿ ಆಯುಕ್ತರು ಕಾರ್ಯಕಾರಿ ಸಮಿತಿಯಲ್ಲಿ ತಮ್ಮ ಕಚೇರಿಯ ಅಥವಾ ಸಂಬಂಧಿತ ರಾಜ್ಯ ಸರ್ಕಾರದ ಅಥವಾ ಯಾವುದೇ ರಾಷ್ಟ್ರೀಯ ಕೈಮಗ್ಗ ಸಂಘಟನೆಯ ಪ್ರತಿನಿಧಿಯೊಬ್ಬರ ನಾಮಾಂಕನ ಮಾಡಬಹುದು.

**ಅನುಷ್ಠಾನ ಏಜೆನ್ಸಿ :** ಕೈಮಗ್ಗದ ಅಭಿವೃದ್ಧಿ ಆಯುಕ್ತರು ಎನ್‌ಹೆಚ್‌ಡಿಸಿ, ಕೈಮಗ್ಗದ ರಫ್ತು ಪ್ರವರ್ತನಾ ಪರಿಷತ್ತು, ಎಸಿಎಎಸ್‌ಹೆಚ್ (ಆಕಾಶ್) ಅಥವಾ ರಾಜ್ಯಮಟ್ಟದ ಅಪೆಕ್ಸ್ ಕೈಮಗ್ಗ ಸಂಘಟನೆ ಅಥವಾ ಯೋಜನೆಯ ಅನುಷ್ಠಾನಕ್ಕಾಗಿ ಸಾಕಷ್ಟು ಆರ್ಥಿಕ ಮತ್ತು ಸಂಘಟನಾ ಸಂಪನ್ಮೂಲಗಳನ್ನು ಹೊಂದಿದ ಸೂಕ್ತ ಆಯ್ಕೆ ಮಾಡಬಹುದು. ರಾಜ್ಯಮಟ್ಟದ ಕೈಮಗ್ಗದ ಸಂಘಟನೆಯಾದಲ್ಲಿ, ಆ ಸಂಘಟನೆಯು ರಾಜ್ಯ ಸರ್ಕಾರದಿಂದ ಪ್ರಾಯೋಜಿಸಲ್ಪಡಬೇಕು. ಅನುಷ್ಠಾನ ಏಜೆನ್ಸಿಯ ಕೈಮಗ್ಗ ಏಜೆನ್ಸಿಯಿಂದ ಅದರ ಪಾಲ್ಗೊಳ್ಳುವಿಕೆಯ ಬಗ್ಗೆ ಸಮ್ಮತಿಯನ್ನು ಪಡೆಯಬೇಕು ಹಾಗೂ ಸಾಕಷ್ಟು ಸಂಖ್ಯೆಯ ಏಜೆನ್ಸಿಗಳು ಭಾಗವಹಿಸಲು ಸಮ್ಮಿತಿಸಿದಲ್ಲಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು. ಏಜೆನ್ಸಿಗಳು ತಮ್ಮ ಬಂಡವಾಳ ಹೂಡಿಕೆಯ ಮೇಲೆ ಉತ್ತಮ ಗಳಿಕೆಯನ್ನು ಸಾಧಿಸಲು ಸಾಧ್ಯವಾಗಬೇಕೆಂಬುದು ಅಗತ್ಯ. ಸಂಕೀರ್ಣದ ನಿರ್ಮಾಣ/ಸ್ವಾಧೀನದ ನಂತರ ಅನುಷ್ಠಾನ ಏಜೆನ್ಸಿಯು ಅದನ್ನು ತಾನೇ ಬಳಸುವುದು ಅಥವಾ ಅರ್ಹ ಏಜೆನ್ಸಿಗಳಿಗೆ ಸಂಕೀರ್ಣದಲ್ಲಿರುವ ಅಂಗಡಿಮಳಿಗೆಗಳನ್ನು ಮಾರಾಟ ಅಥವ ಭೋಗ್ಯಕ್ಕೆ ನೀಡುವುದು.

ಗುರುತಿಸಲ್ಪಟ್ಟ ಅನುಷ್ಠಾನ ಏಜೆನ್ಸಿಯು ಸೂಕ್ತವಾದ ಮಾರುಕಟ್ಟೆಯ ಸಂಕೀರ್ಣವನ್ನು ಕೈಮಗ್ಗದ ಏಜೆನ್ಸಿಗಳಿಗಾಗಿ ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿಯಿಂದ ಅನುಮೋದಿಸಲ್ಪಟ್ಟ ರೀತಿಯಲ್ಲಿ ಸ್ವಾಧೀನಪಡಿಸಿಕೊಳ್ಳುವ/ನಿರ್ಮಾಣ ಮಾಡುವ ಬಗ್ಗೆ ಖಾತ್ರಿಪಡಿಸಿಕೊಳ್ಳುವ ಉದ್ದೇಶದಿಂದ ರಾಜ್ಯ ಸರ್ಕಾರ/ಸ್ಥಳೀಯ ಸಂಸ್ಥೆಗಳು/ಭೂ ಅಭಿವೃದ್ಧಿ ಪ್ರಾಧಿಕಾರಗಳು/ಬಿಲ್ಡರ್‌ಗಳು ಮತ್ತು ಖ್ಯಾತ ಪ್ರವರ್ತಕರೊಂದಿಗೆ ವ್ಯವಹರಿಸುವುದು.

**ಹಣಕಾಸು ನೆರವಿನ ಬಗೆ :** ಯೋಜನೆಯ ಹಣಕಾಸಿನ ನೆರವಿನ ಬಗೆಯು ಕೆಳಕಂಡಂತಿರುವುದು

i) ಮಾರುಕಟ್ಟೆ ಸಂಕೀರ್ಣದ ಸ್ಥಾಪನೆಗಾಗಿ ಸ್ವತ್ತಿನ ಖರೀದಿ/ನಿರ್ಮಾಣಕ್ಕಾಗಿ ನಿಧಿಯೊಂದನ್ನು ಈಗಾಗಲೇ ಸ್ಥಾಪಿಸಿ ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ (ಎನ್‌ಹೆಚ್‌ಡಿಸಿ)ದಿಂದ ಬಳಸಲ್ಪಡಲು ಸಿದ್ಧವಾಗಿ ಇರಿಸಲಾಗಿದೆ. ಆರಂಭಿಕ ಖರೀದಿ/ನಿರ್ಮಾಣದ ನಂತರ ಎನ್‌ಹೆಚ್‌ಡಿಸಿಯು 50% ಮೊತ್ತವನ್ನು ಭಾಗವಹಿಸುವ ಕೈಮಗ್ಗ ಏಜೆನ್ಸಿಗಳಿಂದ ಮರಳಿ ಪಡೆಯಲಿದೆ.

ii) ಮಾರುಕಟ್ಟೆ ಸಂಕೀರ್ಣದ ಖರೀದಿ/ನಿರ್ಮಾಣಕ್ಕಾಗಿ ಹಾಗೂ ಹಾಗೆ ಖರೀದಿಸಿದ/ನಿರ್ಮಿಸಿದ ಪ್ರದರ್ಶನ ಮಳಿಗೆಗಳ ಒಳಾಂಗಣ ಅಲಂಕರಣಗಳಿಗಾಗಿ ಕೇಂದ್ರ ಸರ್ಕಾರವು ಅನುಷ್ಠಾನ ಏಜೆನ್ಸಿಗೆ 50% ಅನುದಾನದ ನೆರವು ಒದಗಿಸುವುದು. ಉಳಿದ 50% ವೆಚ್ಚವನ್ನು ಅನುಷ್ಠಾನ ಏಜೆನ್ಸಿಯು ಒದಗಿಸುವುದು. ಕೇಂದ್ರ ಸರ್ಕಾರದ 50%ನ ಗರಿಷ್ಟ ಪ್ರಮಾಣವು ರೂ. 5.00 ಕೋಟಿಗಳ ಮಿತಿಗೆ ಒಳಪಟ್ಟಿದೆ.

iii) ಸಾಮಾನ್ಯ ಪ್ರದೇಶಗಳಲ್ಲಿ ಒಳಾಂಗಣ ಅಲಂಕರಣ ಹಾಗೂ ಹೊರಾವರಣಗಳ ಲಾಂಡ್‌ಸ್ಕೇಪಿಂಗ್‌ಗಳಿಗಾಗಿ, ಸಂಬಂಧಿತ ಅನುಷ್ಠಾನ ಏಜೆನ್ಸಿಗೆ ಕೇಂದ್ರ ಸರ್ಕಾರದಿಂದ 100% ನೆರವು ಒದಗಿಸಲಾಗುವುದು.

iv) ಅನುಷ್ಠಾನ ಏಜೆನ್ಸಿಯು ಮಾರುಕಟ್ಟೆ ಸಂಕೀರ್ಣದಲ್ಲಿನ ಪ್ರದರ್ಶನ ಮಳಿಗೆಗಳನ್ನು ಕೈಮಗ್ಗ ಏಜೆನ್ಸಿಗಳಿಗೆ ಸರತಿಯ ಆಧಾರದ ಮೇಲೆ ಬಾಡಿಗೆ/ಭೋಗ್ಯಕ್ಕೆ ನೀಡಬಹುದು ಅಥವಾ ಕೈಮಗ್ಗ ಏಜೆನ್ಸಿಗಳಿಗೆ ನೇರ ಮಾರಾಟ ಮಾಡಬಹುದು.

v) ಮಾರುಕಟ್ಟೆ ಸಂಕೀರ್ಣದ ನವೀಕರಣ, ನಿರ್ವಹಣೆ ಮತ್ತು ಸುಸ್ಥಿತಿಯಲ್ಲಿಡುವ ಕೆಲಸಗಳ ಮರುಕಳಿಕೆಯ ವೆಚ್ಚಗಳನ್ನು

ಅನುಷ್ಠಾನ ಏಜೆನ್ಸಿ/ಪ್ರದರ್ಶನ ಮಳಿಗೆಗಳನ್ನು ಹೊಂದಿರುವವರು ಭರಿಸಬೇಕು.

vi) ಒಂದು ಬಾರಿ ಕೈಮಗ್ಗದ ಏಜೆನ್ಸಿಗಳಿಗೆ ನೀಡಲ್ಪಟ್ಟ ಪ್ರದರ್ಶನ ಮಳಿಗೆಗಳನ್ನು, ಕೈಮಗ್ಗದ ಅಭಿವೃದ್ಧಿ ಆಯುಕ್ತರ ಪೂರ್ವಾನುಮತಿಯೊಂದಿಗೆ ಮಾತ್ರ ಅವರಿಂದ ನಿರ್ಧರಿಸಲ್ಪಟ್ಟ ದರ ಮತ್ತು ಬೆಲೆಗಳಲ್ಲಿ ಅಖೈರುಗೊಳಿಸುವುದು/ಇತರ ಏಜೆನ್ಸಿಗಳಿಗೆ ಮಾರಾಟ ಮಾಡುವುದನ್ನು ಮಾಡಬಹುದಾಗಿದೆ.

vii) ನೋಂದಣಿ ವೆಚ್ಚಗಳು ಸೇರಿದಂತೆ ಎಲ್ಲಾ ಪ್ರಾಸಂಗಿಕ ವೆಚ್ಚಗಳನ್ನೂ ಪ್ರದರ್ಶನ ಮಳಿಗೆಗಳ ಮಾಲೀಕರೇ ನೀಡಬೇಕು.

viii) ಅನುಷ್ಠಾನ ಏಜೆನ್ಸಿಯ ಆಸ್ತಿಯ ಖರೀದಿಗಾಗಿ ವಿಸ್ತೃತ ಪ್ರಸ್ತಾವನೆ ಸಲ್ಲಿಸಿದ ನಂತರ ಕೈಮಗ್ಗದ ಅಭಿವೃದ್ಧಿ ಆಯುಕ್ತರು ಈ ಉದ್ದೇಶಕ್ಕಾಗಿ 50% ಮುಂಗಡ ಬಿಡುಗಡೆ ಮಾಡುವುದನ್ನು ಪರಿಗಣಿಸುವರು. ಭಾಗವಹಿಸುವ ಏಜೆನ್ಸಿಯು ಸ್ಥಳಾವಕಾಶ ಕಾದಿರಿಸಲು ಮುಂಗಡ ನೀಡಬೇಕು ಮತ್ತು ಅಭಿವೃದ್ಧಿ ಆಯುಕ್ತ (ಕೈಮಗ್ಗ)ರಿಂದ ಪ್ರತಿಯೋಜನೆಗೆ ನಿರ್ಧರಿಸಲ್ಪಟ್ಟ ಪಾಲಿನ ಕಂತನ್ನು ನೀಡಬೇಕು.

### 3.4 ಪ್ರಚಾರ ಮತ್ತು ಜಾಗೃತಿ

ಅಸಂಘಟಿತ ವಲಯದಲ್ಲಿ ಕೃಷಿಯ ನಂತರದ ಎರಡನೇ ಅತಿದೊಡ್ಡ ಉದ್ಯೋಗಾವಕಾಶದ ಮೂಲವೆನಿಸಿರುವ ಕೈಮಗ್ಗದ ವಲಯಕ್ಕೆ ಉತ್ತೇಜನ ನೀಡಲು ಪ್ರಚಾರ ಅತ್ಯಗತ್ಯ. ಕೈಮಗ್ಗ ವಸ್ತುಗಳು ಭಾರತೀಯ ಪರಂಪರೆಯ ಅಂಗವಾಗಿದ್ದು, ನೇಕಾರರ ಕಲಾತ್ಮಕತೆಯ ಮೂಲಕ ದೇಶದ ಶ್ರೀಮಂತ ವೈವಿಧ್ಯತೆಯನ್ನು ಎತ್ತಿತೋರುತ್ತಿವೆ. ಕೈಮಗ್ಗದ ವಲಯದ ಪ್ರವರ್ತನೆ ಮತ್ತು ಅಭಿವೃದ್ಧಿಗಾಗಿ ಅನೇಕ ಯೋಜನೆಗಳ ರಚನೆ/ಅನುಷ್ಠಾನ ಮಾಡಲಾಗಿದ್ದು, ಇದು ಕೈಮಗ್ಗ ನೇಕಾರರ ಕಲ್ಯಾಣದ ಉದ್ದೇಶ ಹೊಂದಿದೆ. ಪ್ರಚಾರ ಮತ್ತು ಜಾಗೃತಿಗಳಿಂದ ನೇಕಾರರ ಮತ್ತು ಕೈಮಗ್ಗ ಉದ್ಯಮದ ಹಿತಾಸಕ್ತಿಯನ್ನು ಮತ್ತಷ್ಟು ಸಮರ್ಥವಾಗಿ ಮಾಡಲು ಹಾಗೂ ವಿನ್ಯಾಸ, ತಂತ್ರಜ್ಞಾನ ಮತ್ತು ಇತರ ಸಂಬಂಧಿತ ವಿಷಯಗಳನ್ನು ಕುರಿತಂತೆ ವಲಯದ ಒಳಗೆ ಮತ್ತು ಹೊರಗೆ ಹೆಚ್ಚಿನ ಅರಿವು ಮೂಡಿಸಲು ಸಾಧ್ಯವಾಗುತ್ತದೆ.

ಈ ಉಪಾಂಗದ ಅಡಿಯಲ್ಲಿ ಕೆಳಕಂಡ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ.

**3.4.1 ಕೈಮಗ್ಗ ಕುರಿತ ಚಲನಚಿತ್ರಗಳು** : ಕೈಮಗ್ಗದ ವಲಯದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ವಿವಿಧ ಚಿತ್ರಗಳು, ಸಾಕ್ಷ್ಯಚಿತ್ರಗಳು, ವಿಡಿಯೋ ಕ್ಲಿಪ್‌ಗಳು, ಟೆಲಿಫಿಲ್ಮ್‌ಗಳು ಮುಂತಾದವುಗಳನ್ನು ನಿರ್ಮಿಸಬಹುದು. ಈ ಫಿಲ್ಮ್‌ಗಳು/ಸಾಕ್ಷ್ಯಚಿತ್ರಗಳು/ಟೆಲಿಫಿಲ್ಮ್‌ಗಳು/ವಿಡಿಯೋ ಕ್ಲಿಪ್‌ಗಳನ್ನು ಟೆಲಿವಿಷನ್ ವಾಹಿನಿಗಳಲ್ಲಿ, ಕೈಮಗ್ಗದ ಎಕ್ಸ್‌ಪೋ/ಈವೆಂಟ್‌ಗಳಲ್ಲಿ ವಿಶೇಷ ಸಂದರ್ಭಗಳಲ್ಲಿ ಪ್ರದರ್ಶಿಸಬಹುದಾಗಿದ್ದು, ಈ ಪ್ರಕ್ರಿಯೆಗಳೀಂದ ಕೈಮಗ್ಗ ಉತ್ಪನ್ನಗಳನ್ನು ಜನಪ್ರಿಯಗೊಳಿಸಲು ನೆರವಾಗುತ್ತದೆ. ಅಲ್ಲದೇ ಕೈಮಗ್ಗ ಕ್ಷೇತ್ರದಲ್ಲಿನ ತಾಂತ್ರಿಕ ಬೆಳವಣಿಗೆಗಳನ್ನು ವೈಭವೀಕರಿಸುವ ಫಿಲ್ಮ್‌ಗಳನ್ನು ನಿರ್ಮಿಸಿ ಅವುಗಳನ್ನು ಕೈಮಗ್ಗ ನೇಕಾರರಿಗೆ ತೋರಿಸಿ ಆ ಬಗ್ಗೆ ಅವರಲ್ಲಿ ಜಾಗೃತಿ ಮೂಡಿಸಬಹುದು. ಈ ಫಿಲ್ಮ್‌ಗಳ ವಸ್ತು, ನಿರ್ಮಾಣದ ನೀತಿ ನಿಯಮಗಳು ಮತ್ತಿತರ ಷರತ್ತು ಮತ್ತು ನಿಬಂಧನೆಗಳನ್ನು ಅಭಿವೃದ್ಧಿ ಆಯುಕ್ತ(ಕೈಮಗ್ಗ)ರು ನಿಗದಿಪಡಿಸುವರು.

**ಅನುಷ್ಠಾನ ಏಜೆನ್ಸಿ :** ಈ ಬಗ್ಗೆ ಪ್ರಸ್ತಾವನೆಗಳು ರಾಷ್ಟ್ರೀಯ ಕೈಮಗ್ಗ ಅಭಿವೃದ್ಧಿ ನಿಗಮ (ಎನ್‌ಹೆಚ್‌ಡಿಸಿ)/ಕೈಮಗ್ಗ ನಿಗಮಗಳು ಮತ್ತು ಅಪೆಕ್ಸ್ ಸಂಘ ಸಂಘಟನೆಗಳು (ಎಸಿಎಎಸ್‌ಹೆಚ್), ರಾಜ್ಯ ಸರ್ಕಾರ, ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮಗಳು/ಕೈಮಗ್ಗ ಅಪೆಕ್ಸ್ ಸಹಕಾರಿಗಳು/ನೇಕಾರರ ಸೇವಾ ಕೇಂದ್ರಗಳಿಂದ ಬರಬಹುದಾಗಿದೆ.

**ಹಣದ ನೆರವಿನ ಬಗೆ :** ಅಭಿವೃದ್ಧಿ ಆಯುಕ್ತ (ಕೈಮಗ್ಗ)ರು ಅರ್ಹತೆಯನ್ನಾಧರಿಸಿ ಹಣದ ನೆರವಿನ ಬಗೆಯನ್ನು ನಿರ್ಧರಿಸುವರು.

**3.4.2 ರಾಷ್ಟ್ರೀಯ ಹಬ್ಬಗಳು:** ಫ್ಯಾಷನ್ ತಂತ್ರಜ್ಞಾನದ ರಾಷ್ಟ್ರೀಯ ಸಂಸ್ಥೆಯ (ಎನ್ಐಎಫ್‌ಟಿ) ನೆರವಿನೊಂದಿಗೆ, ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿಯು ಗಣರಾಜ್ಯದಿನ ಮುಂತಾದ ರಾಷ್ಟ್ರೀಯ ಉತ್ಸವಗಳಲ್ಲಿ ಪಾಲ್ಗೊಳ್ಳುತ್ತಿದೆ. ಈ ಪ್ರಕ್ರಿಯೆಯು 11ನೇ ಯೋಜನೆಯಲ್ಲಿ ಮುಂದುವರಿಯಲಿದೆ. ಇತ್ತೀಚೆಗೆ ಅಭಿವೃದ್ಧಿ ಪಡಿಸಿದ ಹಾಗೂ ಸಾಂಪ್ರದಾಯಿಕ ವೈಶಿಷ್ಟ್ಯದ ಕೈಮಗ್ಗ ಉತ್ಪನ್ನಗಳ ಆಯ್ದ ಶ್ರೇಣಿಗಳನ್ನು ಪ್ರದರ್ಶಿಸುವ ಸ್ತಬ್ದ ಚಿತ್ರವೊಂದನ್ನು ಪ್ರತಿವರ್ಷ ಪ್ರದರ್ಶಿಸಲಾಗುವುದು.

**ಅನುಷ್ಠಾನ ಏಜೆನ್ಸಿ :** ಪ್ರಸ್ತಾವನೆಯು ಎನ್ಐಎಫ್‌ಟಿ (ಆಕಾಶ್) ಯಿಂದ ಬರುವುದು.

**ಹಣಕಾಸಿನ ನೆರವಿನ ಬಗೆ :** ಅರ್ಹತೆಯನ್ನಾಧರಿಸಿ ಅಭಿವೃದ್ಧಿ ಆಯುಕ್ತ (ಕೈಮಗ್ಗ)ರು ಹಣದ ನೆರವನ್ನು ಅನುಮೋದಿಸುವರು.

**3.4.3. ಮುದ್ರಣ ಮತ್ತು ವಿದ್ಯುನ್ಮಾನ ಪ್ರಚಾರ:** ಕೈಮಗ್ಗಗಳಿಗೆ ಸಂಬಂಧಿಸಿದ ಪ್ರಚಾರ ಕಾರ್ಯಗಳನ್ನು ಭಿತ್ತಿಪತ್ರಗಳು, ಕರಪತ್ರಗಳು, ಪ್ರಚಾರ ಪುಸ್ತಿಕೆಗಳು, ಪುಸ್ತಕ, ಕ್ಯಾಟಲಾಗ್‌ಗಳ ಮುದ್ರಣದಿಂದ, ಪತ್ರಿಕೆಗಳು ಮತ್ತು ನಿಯತಕಾಲಿಕಗಳಲ್ಲಿ ಸಂಯೋಜಿತ ಅಂಕಣಗಳು/ಲೇಖನಗಳು/ಸಂಪಾದಕೀಯಗಳು/ವಿಶೇಷ ಪುರವಣಿಗಳು, ಜಾಹೀರಾತುಗಳ ಮೂಲಕ ಕೈಗೊಳ್ಳಬಹುದು. ವಿವಿಧ ಕೈಮಗ್ಗ ಯೋಜನೆಗಳ ಮಾಹಿತಿಗಳನ್ನು ರಾಷ್ಟ್ರೀಯ ಮತ್ತು ಪ್ರಾಂತೀಯ ಭಾಷೆಗಳಲ್ಲಿಯೂ ಮುದ್ರಿಸಬಹುದು. ವಿದ್ಯುನ್ಮಾನ ಪ್ರಚಾರವನ್ನು ಸಿಡಿಗಳು, ಅಂತರ್ಜಾಲ, ವೆಬ್‌ಸೈಟ್ ಅಭಿವೃದ್ಧಿ ಮುಂತಾದ ರೀತಿಯಲ್ಲಿ ಮಾಡಬಹುದು.

**ಅನುಷ್ಠಾನ ಏಜೆನ್ಸಿ :** ಪ್ರಸ್ತಾವನೆಗಳು ಎನ್‌ಹೆಚ್‌ಡಿಸಿ, ಎಸಿಎಎಸ್‌ಹೆಚ್, ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮಗಳು, ರಾಜ್ಯ ಅಪೆಕ್ಸ್ ಸಹಕಾರ ಸಂಘಗಳು ಮತ್ತು ನೇಕಾರರ ಸೇವಾ ಕೇಂದ್ರಗಳಿಂದ ಅಥವಾ ಅಭಿವೃದ್ಧಿ ಆಯುಕ್ತ (ಕೈಮಗ್ಗ)ರ ಅನುಮೋದನೆ ಪಡೆದ ಇನ್ಯಾವುದೇ ಸಮರ್ಥ ಏಜೆನ್ಸಿಯಿಂದ ಬರಬಹುದಾಗಿದೆ.

**ಹಣಕಾಸು ನೆರವಿನ ಬಗೆ :** ಪ್ರಚಾರ ಪುಸ್ತಿಕೆಗಳು, ಫೋಲ್ಡರುಗಳು, ಕ್ಯಾಟಲಾಗ್‌ಗಳು, ಜರ್ನಲ್‌ಗಳು, ಪುಸ್ತಕಗಳು, ನಕ್ಷೆಗಳು ಮುಂತಾದವುಗಳಿಗೆ ಗರಿಷ್ಠ ಮಿತಿ ರೂ. 3.00ಲಕ್ಷಗಳು. ವಿದ್ಯುನ್ಮಾನ ಪ್ರಚಾರಗಳಿಗಾಗಿ ಹಣಕಾಸಿನ ನೆರವಿನ ಬಗೆಯನ್ನು, ಕೈಮಗ್ಗದ ಅಭಿವೃದ್ಧಿ ಆಯುಕ್ತರ ನೇತೃತ್ವದ ಸಮಿತಿಯು, ಅರ್ಹತೆಯನ್ನಾಧರಿಸಿ ನಿರ್ಧರಿಸುವುದು.

**3.4.4. ವಿಚಾರ ಸಂಕಿರಣ ಮತ್ತು ಕಾರ್ಯಾಗಾರಗಳು :** ವಿವಿಧ ಸಂದರ್ಭಗಳಲ್ಲಿ ಕೈಮಗ್ಗ ತಂತ್ರಜ್ಞಾನ, ವಿನ್ಯಾಸಾಭಿವೃದ್ಧಿ, ಸಾಂಪ್ರದಾಯಿಕ ವಿನ್ಯಾಸಗಳ ಪುನರುತ್ಥಾನ ಮುಂತಾದುವನ್ನು ಚರ್ಚಿಸುವ ಸಲುವಾಗಿ ವಿಚಾರ ಸಂಕಿರಣಗಳನ್ನು ಆಯೋಜಿಸಬಹುದು.

**ಅನುಷ್ಠಾನ ಏಜೆನ್ಸಿ :** ಪ್ರಸ್ತಾವನೆಗಳು ಎನ್‌ಹೆಚ್‌ಡಿಸಿ, ಎಸಿಎಎಸ್‌ಹೆಚ್ (ಆಕಾಶ್), ನೇಕಾರರ ಸೇವಾ ಕೇಂದ್ರಗಳು, ಜವಳಿ ವಿನ್ಯಾಸದ ರಾಷ್ಟ್ರೀಯ ಕೇಂದ್ರ, ರಾಷ್ಟ್ರೀಯ ಹಸ್ತಕಲೆ ಮತ್ತು ಕೈಮಗ್ಗ ವಸ್ತು ಸಂಗ್ರಾಹಾಲಯ ಮುಂತಾದವುಗಳಿಂದ ಬರಬಹುದು.

**ಹಣಕಾಸು ನೆರವಿನ ಬಗೆ :** ವಿಚಾರ ಸಂಕಿರಣ/ಕಾರ್ಯಾಗಾರಗಳಿಗೆ ಸ್ಥಳದ ಬಾಡಿಗೆ/ಮೂಲಭೂತಸೌಕರ್ಯ/ ಪ್ರಚಾರ/ಪ್ರವಾಸಭತ್ಯೆ ಮತ್ತು ತುಟ್ಟಿಭತ್ಯೆಗಳು ಸೇರಿದಂತೆ ಗರಿಷ್ಠ ಮಿತಿಯು ರೂ. 5.00ಲಕ್ಷಗಳಾಗಿದ್ದು, ಕೈಮಗ್ಗದ ಅಭಿವೃದ್ಧಿ ಅಯುಕ್ತರ ನೇತೃತ್ವದ ಸಮಿತಿಯ ಪ್ರಸ್ತಾವನೆಗಳನ್ನು ಯೋಗ್ಯತಾನುಸಾರ ನಿರ್ಧರಿಸುವುದು.

**3.4.5. ರಾಷ್ಟ್ರೀಯ ಪ್ರಶಸ್ತಿಗಳು :** ಕೈಮಗ್ಗದ ನೇಕಾರರ ಪೈಕಿ ಶ್ರೇಷ್ಠ ಮತ್ತು ಅರ್ಹರಾದವರನ್ನು ಗುರುತಿಸುವ ಸಲುವಾಗಿ, ಆಯ್ದ ಶ್ರೇಷ್ಠ ನೇಕಾರರಿಗೆ ರಾಷ್ಟ್ರೀಯ ಪ್ರಶಸ್ತಿ ಮತ್ತು ರಾಷ್ಟ್ರೀಯ ಅರ್ಹತಾ ಪತ್ರಗಳನ್ನು ನೀಡಲಾಗುತ್ತದೆ. ರಾಷ್ಟ್ರೀಯ ಪ್ರಶಸ್ತಿಗಳು ಒಂದು ಪ್ರಮಾಣಪತ್ರ, ಒಂದು ಅಂಗವಸ್ತ್ರ, ಒಂದು ತಾಮ್ರ ಫಲಕ ಮತ್ತು ರೂ. 50,000/-ಗಳ ನಗದು ಬಹುಮಾನಗಳನ್ನು ಒಳಗೊಂಡಿರುತ್ತದೆ. ರಾಷ್ಟ್ರೀಯ ಅರ್ಹತಾ ಪತ್ರದೊಂದಿಗೆ ಒಂದು ಪ್ರಮಾಣಪತ್ರ ಮತ್ತು ರೂ. 10,000/-ಗಳ ನಗದು ಬಹುಮಾನಗಳಿರುತ್ತವೆ. ಈ ಉದ್ದೇಶಕ್ಕಾಗಿ ರಚಿಸಲ್ಪಟ್ಟ ಸಮಿತಿಯು ನೇಕಾರರನ್ನು ಆಯ್ಕೆ ಮಾಡುವುದು. ರಾಷ್ಟ್ರೀಯ ಪ್ರಶಸ್ತಿಗಳಿಗಾಗಿ ಆಯ್ಕೆಯ ವಿಸ್ತೃತ ಮಾರ್ಗಸೂಚಿಗಳು **ಪರಿಶಿಷ್ಟ – vi** ರಲ್ಲಿ ಲಭ್ಯವಿವೆ.

**ಅನುಷ್ಠಾನ ಏಜೆನ್ಸಿ ಮತ್ತು ಹಣಕಾಸು ನೆರವಿನ ಬಗೆ :** ಈ ಪ್ರಕ್ರಿಯೆಯನ್ನು ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿಯ ಸಹಯೋಗದೊಂದಿಗೆ ಕೈಗೊಳ್ಳಲಾಗುವುದು ಹಾಗೂ ಅವರು ಕುಶಲಕರ್ಮಿಗಳಿಗೆ ಪ್ರಶಸ್ತಿ ಮತ್ತು ಅರ್ಹತಾ ಪತ್ರಗಳನ್ನು ನೀಡುವರು. ಮೂಲ ಸೌಕರ್ಯ, ಪ್ರಚಾರ ಮತ್ತು ಪ್ರಾಸಂಗಿಕ ವೆಚ್ಚಗಳನ್ನು ಎರಡೂ ಕಚೇರಿಗಳ ನಡುವೆ ಹಂಚಿಕೊಳ್ಳಲಾಗುವುದು.

**3.4.6. ಮಹಾನ್ ಸೃಷ್ಟಿ ಕಾರ್ಯಕ್ರಮ:** ರಾಷ್ಟ್ರ ಪ್ರಶಸ್ತಿ ವಿಜೇತರು ತಮ್ಮ ಉತ್ಪನ್ನಗಳನ್ನು ಸಾರ್ವಜನಿಕರಿಗೆ ಪ್ರದರ್ಶಿಸಲು ಅವಕಾಶ ಕಲ್ಪಿಸುವ ಸಲುವಾಗಿ ಮಹಾನ್‌ಸೃಷ್ಟಿ ಕಾರ್ಯಕ್ರಮ (ಮಾಸ್ಟರ್ ಕ್ರಿಯೇಷನ್ಸ್ ಪ್ರೋಗ್ರಾಮ್) ಎಂಬ ಹೆಸರಿನ ವಿಶೇಷ ಕಾರ್ಯಕ್ರಮವೊಂದನ್ನು ಪ್ರತಿವರ್ಷವೂ, ಕೈಮಗ್ಗದ ಅಭಿವೃದ್ಧಿ ಆಯುಕ್ತರು ಹಾಗೂ ಹಸ್ತಕಲೆಗಳ ಅಭಿವೃದ್ಧಿ ಆಯುಕ್ತರ ಕಚೇರಿಗಳಿಂದ ಜಂಟಿಯಾಗಿ ನವದೆಹಲಿಯ ದಿಲ್ಲಿ ಹಾತ್‌ನಲ್ಲಿ ಏರ್ಪಡಿಸಲಾಗುತ್ತದೆ.

**ಅನುಷ್ಠಾನ ಏಜೆನ್ಸಿ :** ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿಗಾಗಿ ದೆಹಲಿಯ ನೇಕಾರರ ಸೇವಾ ಕೇಂದ್ರವು ಅನುಷ್ಠಾನ ಏಜೆನ್ಸಿಯಾಗಿರುವುದು.

**ಹಣಕಾಸು ನೆರವಿನ ಬಗ್ಗೆ :** ಈ ಕಾರ್ಯಕ್ರಮಕ್ಕಾಗಿ ಸ್ಥಳದ ಬಾಡಿಗೆ/ಮೂಲಸೌಕರ್ಯ/ಪ್ರಚಾರ/ಪ್ರಾಸಂಗಿಕ ಚಟುವಟಿಕೆಗಳಿಗಾಗಿ ಲಭ್ಯವಿರುವ ಗರಿಷ್ಠ ಹಣದ ಮೊತ್ತ ರೂ. 10.00ಲಕ್ಷಗಳು.

**3.4.7. ಸುಮುಚಿತ ತಂತ್ರಜ್ಞಾನ ಪ್ರದರ್ಶನ :** ಈ ಕಾರ್ಯಕ್ರಮದ ಅಡಿಯಲ್ಲಿ ಕೈಮಗ್ಗ ವಲಯದಲ್ಲಿನ ತಾಂತ್ರಿಕ ಬೆಳವಣಿಗೆಗಳ ಬಗ್ಗೆ ಪ್ರದರ್ಶನ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಎನ್‌ಹೆಚ್‌ಡಿಸಿ, ನೇಕಾರರ ಸೇವಾ ಕೇಂದ್ರಗಳು ಮತ್ತು ಐಐಹೆಚ್‌ಟಿ ಮುಂತಾದ ಆಯ್ದ ಸಂಘಟನೆಗಳು ಏರ್ಪಡಿಸುತ್ತವೆ. ಈ ಕಾರ್ಯಕ್ರಮದಿಂದಾಗಿ ನೇಕಾರರಿಗೆ ಇತ್ತೀಚಿನ ತಂತ್ರಜ್ಞಾನಗಳ ಬಗ್ಗೆ ಜ್ಞಾನಾರ್ಜನೆಗೆ ನೆರವಾಗುವುದಲ್ಲದೇ, ನೂತನ ತಂತ್ರಜ್ಞಾನ ಬಳಸಿ ನಿರ್ಮಿಸಿದ ತಮ್ಮ ಉತ್ಪನ್ನಗಳನ್ನು ಪ್ರದರ್ಶನಗಳ ಮೂಲಕ ಮಾರಾಟ ಮಾಡುವ ಅವಕಾಶವೂ ಪ್ರಾಪ್ತವಾಗಲಿದೆ.

**ಅನುಷ್ಠಾನ ಏಜೆನ್ಸಿ:** ಪ್ರಸ್ತಾವನೆಗಳು ಎನ್‌ಹೆಚ್‌ಡಿಸಿ, ನೇಕಾರರ ಸೇವಾಕೇಂದ್ರಗಳು ಹಾಗೂ ಐಐಹೆಚ್‌ಟಿಗಳಿಂದ ಬರಬಹುದು.

**ಹಣಕಾಸಿನ ನೆರವಿನ ಬಗೆ :** ಸ್ಥಳದ ಬಾಡಿಗೆ/ಮೂಲಭೂತ ಸೌಕರ್ಯ/ಪ್ರಾಸಂಗಿಕ ವೆಚ್ಚಗಳಿಗಾಗಿ ರೂ. 6.00 ಲಕ್ಷಗಳವರೆಗಿನ ಗರಿಷ್ಠ ನೆರವು ಲಭ್ಯವಿದೆ.

**3.4.8. ಖರೀದಿ–ಮಾರಾಟಗರರ ವಿಲೋಮ ಸಮಾವೇಶಗಳೂ ಸೇರಿದಂತೆ ಖರೀದಿ–ಮಾರಾಟಗಾರರ ಸಮಾವೇಶಗಳು :**

ಖರೀದಿದಾರ–ಮಾರಾಟಗಾರರ ವಿಲೋಮ ಸಮಾವೇಶಗಳ ಮೂಲಕ ಮಾರುಕಟ್ಟೆಯಲ್ಲಿ ಪ್ರಸ್ತುತಪಡಿಸುವಿಕೆಯನ್ನು ಕೈಗೊಳ್ಳಲಾಗುವುದು. ಅನುಷ್ಠಾನ ಏಜೆನ್ಸಿಯು ಅಭಿವೃದ್ಧಿ ಆಯುಕ್ತ(ಕೈಮಗ್ಗ)ರಿಗೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಅವರು ಅದನ್ನು ಯೋಗ್ಯತಾನುಸಾರ ನಿರ್ಧಾರ ಕೈಗೊಳ್ಳುವರು.

**ಅನುಷ್ಠಾನ ಏಜೆನ್ಸಿ :** ಪ್ರಸ್ತಾವನೆಗಳು ಎನ್‌ಹೆಚ್‌ಡಿಸಿ, ಎಸಿಎಎಸ್‌ಹೆಚ್ (ಆಕಾಶ್), ರಾಜ್ಯಕೈಮಗ್ಗ ಅಪೆಕ್ಸ್ ಸಹಕಾರಿ ಸಂಘಗಳು, ನೇಕಾರರ ಸೇವಾ ಕೇಂದ್ರಗಳು ಮುಂತಾದವು ಪ್ರಸ್ತಾವನೆ ಸಲ್ಲಿಸಬಹುದು.

**ಹಣಕಾಸಿನ ನೆರವಿನ ಬಗೆ :** ಸ್ಥಳದ ಬಾಡಿಗೆ/ಮೂಲಭೂತ ಸೌಕರ್ಯ/ಪ್ರಚಾರ/ಪ್ರಯಾಣ ಭತ್ಯೆ ಮತ್ತು ತುಟ್ಟಿಭತ್ಯೆಗಳು ಸೇರಿದಂತೆ ಪ್ರಾಸಂಗಿಕ ವೆಚ್ಚಗಳಿಗಾಗಿ ಗರಿಷ್ಠ ಮೊತ್ತ ರೂ. 5.00 ಲಕ್ಷಗಳು.

**3.4.9. ಇತರ ಪ್ರವರ್ತನಾ ಚಟುವಟಿಕೆಗಳು :**

ಇದರಲ್ಲಿ ರೋಡ್‌ಷೋಗಳು, ನೇರ ಪ್ರಾತ್ಯಕ್ಷಿಕೆಗಳು, ಸ್ಮರಣ ಫಲಕಗಳು, ಫ್ಯಾಷನ್‌ಷೋಗಳು, ಸಂಸ್ಕೃತಿ ವಿನಿಮಯ ಕಾರ್ಯಕ್ರಮಗಳು, ಪ್ರವಾಸೋದ್ಯಮ, ಸಂಸ್ಕೃತಿ ಸಚಿವಾಲಯಗಳು ಹಾಗೂ ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿ ಮುಂತಾದ ಸಚವಾಲಯ/ಇಲಾಖೆಗಳಿಂದ ಆಯೋಜಿಸಲ್ಪಟ್ಟ/ಅನುಮೋದಿಸಲ್ಪಟ್ಟ ನೇಕಾರರ ವಿನಿಮಯ ಕಾರ್ಯಕ್ರಮಗಳು ಹಾಗೂ ಕೈಮಗ್ಗದ ವಲಯದ ಪ್ರಚಾರ ಮತ್ತು ಜನಪ್ರಿಯತೆಗಳ ಹೆಚ್ಚಳಕ್ಕಾಗಿ ಅಭಿವೃದ್ಧಿ ಆಯುಕ್ತ (ಕೈಮಗ್ಗ)ರಿಂದ ಉಪಯೋಗಿಯೆಂದು ಪರಿಗಣಿಸಲ್ಪಟ್ಟ ಇನ್ನ್ಯಾವುದೇ ಮಾಧ್ಯಮ ಸಾಧನಗಳು ಇದರಲ್ಲಿ ಒಳಗೊಳ್ಳುತ್ತವೆ.

**ಅನುಷ್ಠಾನ ಏಜೆನ್ಸಿ:** ಪ್ರಸ್ತಾವನೆಗಳು ಎನ್‌ಹೆಚ್‌ಡಿಸಿ, ಎಸಿಎಎಸ್‌ಹೆಚ್ (ಆಕಾಶ್), ರಾಜ್ಯ ಸರ್ಕಾರಗಳು, ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮಗಳು/ರಾಜ್ಯ ಕೈಮಗ್ಗ ಅಪೆಕ್ಸ್ ಸಹಕಾರಿ ಸಂಘಗಳು, ನೇಕಾರರ ಸೇವಾ ಕೇಂದ್ರಗಳು ಮುಂತಾದವರಿಂದ ಬರಬಹುದು.

ಹಣಕಾಸು ನೆರವಿನ ಬಗೆ: ಪ್ರಸ್ತಾವನೆಗಳ ಯೋಗ್ಯತಾನುಸಾರವಾಗಿ ಹಣಕಾಸಿನ ನೆರವು ಅಭಿವೃದ್ಧಿ ಆಯುಕ್ತ (ಕೈಮಗ್ಗ)ರಿಂದ ನಿರ್ಧರಿಸಲ್ಪಡುತ್ತವೆ.

**3.5. ಭೌಗೋಳಿಕ ಸೂಚನಾ ಅಧಿನಿಯಮ (ಜಿಯಾಗ್ರಫಿಕಲ್ ಇಂಡಿಕೇಶನ್ ಆ್ಯಕ್ಟ್):**

ಸಾಂಪ್ರದಾಯಿಕ ಕೈಮಗ್ಗ ಪ್ರಾಕಾರಗಳಾದ ಬನಾರಸಿ, ಬಂಗಾಳದ ಜಾಮ್‌ದನಿ ಮುಂತಾದವುಗಳನ್ನು ಜಿಐ ಕಾಯಿದೆಯ ಅಡಿಯಲ್ಲಿ ಸಂರಕ್ಷಿಸಲು ಕ್ರಮಕೈಗೊಳ್ಳಲಾಗುವುದು. 11ನೇ ಯೋಜನೆಯಲ್ಲಿ ಪ್ರತಿ ಉತ್ಪನ್ನಕ್ಕೆ 1.50ಲಕ್ಷ ರೂ.ಗಳ ವೆಚ್ಚದಲ್ಲಿ ವಿವಿಧ ರಾಜ್ಯಗಳ ಸುಮಾರು 110 ಸಾಂಪ್ರದಾಯಿಕ ಕೈಮಗ್ಗ ಉತ್ಪನ್ನಗಳನ್ನು ಜಿಐ ಕಾಯಿದೆಯ ಅಡಿಯಲ್ಲಿ ತರಲು ಪ್ರಯತ್ನ ಮಾಡಲಾಗುವುದು. ಸುಮಾರು ಒಂದು ವರ್ಷದ ನಿಗದಿತ ಕಾಲಾವಧಿಯಲ್ಲಿ ಪ್ರತಿ ಐಟಂಗೆ ರೂ. 1.50 ಲಕ್ಷಗಳ ಅಥವಾ ವಾಸ್ತವಿಕ ವೆಚ್ಚಗಳಲ್ಲಿ ಯಾವುದು ಕಡಿಮೆಯೋ ಆ ವೆಚ್ಚದಲ್ಲಿ ಆಯಾ ರಾಜ್ಯ ಸರ್ಕಾರಗಳು ತಾವೇ ನೇರವಾಗಿ ಅಥವಾ ತಮ್ಮ ಅನುಷ್ಠಾನ ಏಜೆನ್ಸಿಗಳ ಮೂಲಕ ಪ್ರತಿಯೊಂದು ಕೈಮಗ್ಗದ ಉತ್ಪನ್ನದ ನೋಂದಣಿ ಮಾಡಬಹುದಾಗಿದೆ. ಯಾವುದೇ ಹೆಚ್ಚುವರಿ ವೆಚ್ಚಗಳನ್ನು ರಾಜ್ಯ ಸರ್ಕಾರ/ಏಜೆನ್ಸಿಯು ಭರಿಸಬೇಕು. ಹಣವನ್ನು ಎರಡು ಕಂತುಗಳಲ್ಲಿ, 50% ಮುಂಗಡ ಮತ್ತು ಉಳಿದಿದ್ದನ್ನು ಕೆಲಸ ಮುಗಿದ ನಂತರ ಬಿಡುಗಡೆ ಮಾಡಬಹುದಾಗಿದೆ.

**3.6. ಕೈಮಗ್ಗ ಮಾರುಕಟ್ಟೆ ಸಂಕೀರ್ಣ, ಜನಪಥ, ನವದೆಹಲಿ :**

ಭಾರತ ಸರ್ಕಾರದ ನಗರಾಭಿವೃದ್ಧಿ ಮತ್ತು ಬಡತನ ನಿರ್ಮೂಲನಾ ಸಚಿವಾಲಯವು, ಕೈಮಗ್ಗದ ಏಜೆನ್ಸಿಗಳು ತಮ್ಮ ಮಾರಾಟ ಹೆಚ್ಚಿಸಿಕೊಂಡು ಗ್ರಾಹಕರುಗಳಿಗೆ ಗುಣಮಟ್ಟದ ಉತ್ಪನ್ನಗಳನ್ನು ಒದಗಿಸಲು ಅವರಿಗೆ ಖಾಯಂ ಮಾರಾಟ ಮಳಿಗೆಗಳನ್ನು ಒದಗಿಸುವ ಸಲುವಾಗಿ, ಜಾಗತಿಕ ಮಟ್ಟದ ಕೈಮಗ್ಗ ಮಾರಾಟ ಸಂಕೀರ್ಣ ನಿರ್ಮಿಸಿ ನೇಕಾರರಿಗೆ ಮೂಲಭೂತ ಸೌಕರ್ಯ ಒದಗಿಸಲು ಅನುವಾಗುವಂತೆ, ಜನಪಥ್‌ನಲ್ಲಿ 1,779 ಎಕರೆ ಭೂಮಿಯನ್ನು 25ನೇ ಜೂನ್ 2001ರಂದು ಜವಳಿ ಸಚಿವಾಲಯಕ್ಕೆ ನೀಡಿದ್ದಿತು. ದೇಶದ ರಾಜಧಾನಿಯಲ್ಲಿನ ಈ ಪ್ರಸ್ತಾವಿತ ಮಾರುಕಟ್ಟೆ ಸಂಕೀರ್ಣವು ದೇಶದಾದ್ಯಂತ ನಮ್ಮ ಪ್ರತಿಭಾವಂತ ನೇಕಾರರು ತಯಾರಿಸುವ ವೈವಿಧ್ಯಮಯ ಕೈಮಗ್ಗದ ಉತ್ಪನ್ನಗಳಿಗೆ ಹೊಸ ಮಾರ್ಗ ಕಲ್ಪಿಸಲಿದೆ. ಇದು ದೇಶವಿದೇಶಗಳಲ್ಲಿ ಕೈಮಗ್ಗದ ಉತ್ಪನ್ನಗಳಿಗೆ ವೇದಿಕೆಯಾಗಿ ಪರಿಣಮಿಸಲಿದೆ. ಈ ನೂತನ ಕಟ್ಟಡವು ಕೈಮಗ್ಗ ಏಜೆನ್ಸಿಗಳಿಗೆ ಸ್ಥಳಾವಕಾಶ ನೀಡಿ ದೇಶ ವಿದೇಶಗಳ ಗ್ರಾಹಕರುಗಳನ್ನು ಖರೀದಿಗಾಗಿ ಆಕರ್ಷಿಸಲಿದೆ. ಇದು ಕೈಮಗ್ಗದ ವಲಯದಲ್ಲಿ ನೇರ ವಿದೇಶಿ ಹೂಡಿಕೆ(ಎಫ್‌ಡಿಐ)ಯನ್ನೂ ಆಕರ್ಷಿಸಲಿದ್ದು, ದೇಶಕ್ಕೆ ಆದಾಯ ಮತ್ತು ವಿದೇಶಿ ವಿನಿಮಯ ಗಳಿಕೆಗೆ ಕಾರಣವಾಗಲಿದೆ. ಈ ಕಟ್ಟಡವು ಅತ್ಯಾಧುನಿಕ ನಿರ್ಮಿತಿಯಾಗಲಿದ್ದು, ಒಂದೇ ಸೂರಿನಡಿ ದೇಶಧ ವಿವಿಧ ಭಾಗಗಳ ಬಹುಬೇಡಿಕೆಯ ಕೈಮಗ್ಗದ ಉತ್ಪನ್ನಗಳಿಗೆ ಜಾಗ ಮಾಡಿಕೊಡಲಿದೆ.

**ಭಾಗವಹಿಸುವವರು / ಫಲಾನುಭವಿಗಳು:** ಹ್ಯಾಂಡ್‌ಲೂಮ್ ಹೌಸ್ ಮತ್ತು ಈ ಪ್ಲಾಟ್‌ನ ನಿರ್ಮಿತ ಪ್ರದೇಶದಲ್ಲಿ ಈಗ ಸ್ಥಿತವಿರುವ ಮತ್ತು ಅರ್ಹ ಏಜೆನ್ಸಿಗಳು ಸಹ ಈ ಕಟ್ಟಡದಲ್ಲಿ ಸ್ಥಳಾವಕಾಶ ಪಡೆಯಬಹುದು.

**ಅನುಷ್ಠಾನ ಏಜೆನ್ಸಿ:** ಅಭಿವೃದ್ಧಿ ಆಯುಕ್ತ (ಕೈಮಗ್ಗ)ರ ಕಚೇರಿ.

**ಆಡಳಿತ ಮತ್ತು ನಿರ್ವಹಣೆ :** ಜನಪಥ್‌ನ ಕೈಮಗ್ಗ ಸಂಕೀರ್ಣದ ಆಡಳಿತ ಮತ್ತು ನಿರ್ವಹಣೆಯು ವಿಶೇಷೋದ್ದೇಶ ವಾಹನ (ಎಸ್‌ಪಿವಿ) ವಿಧದ ಅನ್ವಯ ಇರುತ್ತದೆ.

**3.7. ಹ್ಯಾಂಡ್‌ಲೂಮ್ ಮಾರ್ಕ್**

ಬ್ರಾಂಡಿಂಗ್ ಪ್ರಕ್ರಿಯೆಯು ಉತ್ಪನ್ನಗಳ ಆರ್ಥಿಕ ಮೌಲ್ಯ ಹೆಚ್ಚಿಸುತ್ತದೆಯಲ್ಲದೇ, ಗ್ರಾಹಕರಿಗೆ ಆಕರ್ಷಣೀಯವಾಗುವ ರೀತಿಯಲ್ಲಿ ಉತ್ಪನ್ನದ ಗುಣಸೌಲಭ್ಯಗಳನ್ನು ರೂಢಿಸಲು ನೆರವಾಗುತ್ತದೆ.

28ನೇ ಜೂನ್ 2006ರಂದು ಮಾನ್ಯ ಪ್ರಧಾನ ಮಂತ್ರಿಗಳಿಂದ ಬಿಡುಗಡೆ ಮಾಡಲ್ಪಟ್ಟು ಈ ಕೈಮಗ್ಗದ ಹೆಗ್ಗುರುತು, ಕೈಮಗ್ಗದ ಉತ್ಪನ್ನಗಳಿಗೆ ಪ್ರಬಲ ಬ್ರಾಂಡ್ ನಿಲುವಿನ ಮೆರುಗು ನೀಡುವಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದೆ. ಕೈಮಗ್ಗದ ಉತ್ಪಾದನೆಯನ್ನು ವಿದ್ಯುತ್ ಮಗ್ಗ ಮಿಲ್ ಉತ್ಪಾದನೆಯಿಂದ ಪ್ರತ್ಯೇಕಿಸಲು ಹ್ಯಾಂಡ್‌ಲೂಮ್ ಮಾರ್ಕ್ ನೆರವಾಗುತ್ತದೆ. ಭಾರತ ಮತ್ತು ವಿದೇಶಗಳಲ್ಲಿ ಕೈಮಗ್ಗದ ಉತ್ಪನ್ನಗಳಿಗೆ ಬ್ರಾಂಡ್ ನಿರ್ಮಾಣ ಮಾಡಲು ಹ್ಯಾಂಡ್‌ಲೂಮ್ ಮಾರ್ಕ್ ಬಳಕೆ ಮಾಡಲಾಗುತ್ತಿದೆ.

**ಫಲಾನುಭವಿಗಳು :** ಪ್ರತ್ಯೇಕ ನೇಕಾರರು, ವಿಶಿಷ್ಟ ನೇಕಾರರು, ಬಿಡಿ ಮಾರಾಟಗಾರರು ನಿಗಮ/ಸಹಕಾರಿ ಸಂಘಗಳು ಹಾಗು ರಫ್ತುದಾರರು.

**ಅನುಷ್ಠಾನ ಏಜೆನ್ಸಿ :** ಜವಳಿಸಮಿತಿ–ಜವಳಿ ಸಚಿವಾಲಯದ ಆಡಳಿತಾತ್ಮಕ ನಿಯಂತ್ರಣದಲ್ಲಿರುವ ಒಂದು ಶಾಸನಬದ್ಧ ನಿಕಾಯ.

**ಆರ್ಥಿಕ ನೆರವು :** ಕೈಮಗ್ಗದ ಅಭಿವೃದ್ಧಿ ಆಯುಕ್ತರ ಕಚೇರಿಯಿಂದ ಅನುಮೋದಿಸಲ್ಪಟ್ಟ ಕಾರ್ಯಯೋಜನೆಯ ಪ್ರಕಾರ. ಜಾಹೀರಾತುಗಳು, ದೇಶವಿದೇಶಗಳ ಪತ್ರಿಕೆಗಳು ಮತ್ತು ಮ್ಯಾಗಸಿನ್‌ಗಳಲ್ಲಿ ಸಂಯೋಜಿತ ಲೇಖನಗಳು ಮತ್ತು ಸಂಪಾದಕೀಯಗಳು, ವಿದ್ಯುನ್ಮಾನ ಪ್ರಚಾರ, ಹೊರಾಂಗಣ ಪ್ರಚಾರ, ದೇಶವಿದೇಶಗಳಲ್ಲಿ ವಿಶೇಷ ಈವೆಂಟ್‌ಗಳು ಮತ್ತು ಪ್ರದರ್ಶನಗಳು, ಫ್ಯಾಷನ್‌ಷೋಗಳು ಮುಂತಾದ ವಿವಿಧ ಪ್ರಚಾರ ಚಟುವಟಿಕೆಗಳು ಹಾಗೂ ಕೈಮಗ್ಗದ ಅಭಿವೃದ್ದಿ ಆಯುಕ್ತರ ಕಚೇರಿಯಿಂದ ಅನುಮೋದಿಸಲ್ಪಟ್ಟ ಇನ್ಯಾವುದೇ ಮಾಧ್ಯಮ ಸಾಧನಗಳು/ಚಟುವಟಿಕೆಗಳನ್ನು ಕೈಗೊಳ್ಳಲಾಗುವುದು.

**4.0 ಉಸ್ತುವಾರಿ ಮತ್ತು ಮೌಲ್ಯಮಾಪನ :**

ಯೋಜನೆಯಡಿಯಲ್ಲಿ ಕೈಗೊಳ್ಳಲಾಗುವ ಚಟುವಟಿಕೆಗಳು ಯೋಜನೆಯಲ್ಲಿ ಹೇಳಲಾಗಿರುವ ಧ್ಯೇಯೋದ್ದೇಶಗಳಿಗೆ ಪೂರಕವಾಗಿರುವುದನ್ನು ಹಾಗೂ ಅವು ಪ್ರಸ್ತುತ ಮಾರ್ಗಸೂಚಿಗಳ ಪ್ರಕಾರ ಕೈಮಗ್ಗದ ವಲಯದ ಒಟ್ಟಾರೆ ಹಿತಾಸಕ್ತಿ ಹಾಗೂ ಅಭಿವೃದ್ಧಿಗಳಿಗೆ ಪೂರಕವಾಗಿ ಜಾರಿಗೊಳ್ಳುವುದನ್ನು ಖಾತ್ರಿಪಡಿಸಿಕೊಳ್ಳುವ ಸಲುವಾಗಿ, ಅಭಿವೃದ್ಧಿ ಆಯುಕ್ತರ ಕಚೇರಿಯ ಅನುಷ್ಠಾನ ಏಜೆನ್ಸಿಗಳಿಂದ ಕಾಲಕಾಲಕ್ಕೆ ವರದಿಗಳನ್ನು ತರಿಸಿಕೊಂಡು ಅನುಷ್ಠಾನ ಪ್ರಕ್ರಿಯೆಯ ಮೇಲುಸ್ತುವಾರಿ ಗಮನಿಸುವುದು. ಅಲ್ಲದೇ ಸಕ್ಷಮ ಪ್ರಾಧಿಕಾರವು ಹಣ ಬಿಡುಗಡೆ ಮಾಡುವ ಸಮಯದಲ್ಲಿ ನಿಗದಿತ ಮಾರ್ಗಸೂಚಿಗಳನ್ವಯ ಉಪಾಂಗಗಳ ಅನುಷ್ಠಾನವನ್ನು ಪರಿಶೀಲಿಸುವುದು.

**ಕೈಮಗ್ಗದ ರಫ್ತು ಪ್ರವರ್ತನೆ :**

**5.0 ಕೈಮಗ್ಗದ ರಫ್ತು ಪ್ರವರ್ತನೆಯ ಉದ್ದೇಶ**

i) ಸೂಕ್ತ ಅಪೆಕ್ಸ್/ಪ್ರಾಥಮಿಕ ಕೈಮಗ್ಗದ ಸಹಕಾರ ಸಂಘಗಳು ಮತ್ತು ನಿಗಮಗಳನ್ನು ಗುರುತಿಸಿ, ಅವರಿಗೆ ವಿನ್ಯಾಸ ಸೃಷ್ಟಿಗಾಗಿ ತಜ್ಞ ವೃತ್ತಿನಿರತ ವಿನ್ಯಾಸಗಾರರನ್ನು ನೇಮಿಸಿಕೊಳ್ಳಲು ನೆರವಾಗುವುದು. ಕೌಶಲ್ಯ ಉನ್ನತೀಕರಣ ನೀಡಿಕೆ, ವೃತ್ತಿನಿರತ ಮಾರ್ಕೆಟಿಂಗ್ ಸಲಹೆಗಾರರನ್ನು ನೇಮಿಸಿಕೊಳ್ಳಲು ನೆರವು ಮುಂತಾದ ಕ್ರಮಗಳಿಂದ, ಅವರು ರಫ್ತು ಮಾಡಲು ಅರ್ಹವೆನಿಸಿದ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುವಂತೆ ಮಾಡುವುದು.

ii) ಅಂತರಾಷ್ಟ್ರೀಯ ಪ್ರದರ್ಶನಗಳು, ಖರೀದಿ–ಮಾರಾಟಗಾರರ ಸಮಾವೇಶಗಳು, ವಿಲೋಮ ಖರೀದಿ–ಮಾರಾಟಗಾರರ ಸಮಾವೇಶಗಳು ಮುಂತಾದವುಗಳಲ್ಲಿ ಭಾಗವಹಿಸುವುದರ ಮೂಲಕ ಮಾರುಕಟ್ಟೆಯಲ್ಲಿ ಉತ್ಪನ್ನ ಸಾದರಪಡಿಸುವಿಕೆ ಹಾಗೂ ಹ್ಯಾಂಡಲೂಮ್ ಮಾರ್ಕ್ ಮತ್ತಿತರ ಕ್ರಮಗಳಿಂದ ಪ್ರಚಾರ ಮತ್ತು ಬ್ರ್ಯಾಂಡ್ ನಿರ್ಮಾಣ.

**6.0 ಕೈಮಗ್ಗ ರಫ್ತು ಪ್ರವರ್ತನೆಯಡಿಯಲ್ಲಿ ಉಪ ಅಂಶಗಳು.**

i) ರಫ್ತು ಯೋಜನೆ
ii) ಅಂತರರಾಷ್ಟ್ರೀಯ ಮೇಳಗಳು ಮತ್ತು ಪ್ರದರ್ಶನಗಳು
iii) ಡಿಸೈನ್ ಸ್ಟುಡಿಯೋ ಸ್ಥಾಪನೆ
iv) ಇತರ ಪ್ರವರ್ತನಾತ್ಮಕ ಚಟುವಟಿಕೆಗಳು

**6.1 ರಫ್ತುಯೋಜನೆಗಳು**

ರಫ್ತಿಗೆ ಅರ್ಹ ಉತ್ಪನ್ನಗಳನ್ನು ಅಭಿವೃದ್ಧಿ ಪಡಿಸಲು ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಗಳಿಗಾಗಿ ರಫ್ತು ಯೋಜನೆಗಳನ್ನು ಮಂಜೂರು ಮಾಡಲಾಗುವುದು.

**6.1.1 ರಫ್ತು ಯೋಜನೆಯು ಕೆಳಕಂಡ ಉಪಶೀರ್ಷಿಕೆಗಳನ್ನು ಹೊಂದಿರುವುದು**

i) ವಿನ್ಯಾಸದ ಆವಿಷ್ಕಾರ ಮತ್ತು ಉತ್ಪನ್ನ ವೈವಿಧ್ಯ
ii) ಕೌಶಲ್ಯ ಉನ್ನತೀಕರಣ ಮತ್ತು ಮಗ್ಗಗಳ ಮಾರ್ಪಾಡು
iii) ಮಾದರಿಗಳ ಅಭಿವೃದ್ಧಿ
iv) ಪ್ಯಾಕೇಜಿಂಗ್ ತರಬೇತಿ
ii) ಮಾರ್ಕೆಟಿಂಗ್ ಸಲಹೆಗಾರರ ನೇಮಕ
ii) ಪ್ರವರ್ತನಾತ್ಮಕ ಸಾಮಗ್ರಿ ಅಭಿವೃದ್ಧಿಪಡಿಸುವಿಕೆ ಮತ್ತು
ii) ಪ್ರಚಾರ ಮತ್ತು ಮಾರ್ಕೆಟಿಂಗ್

**6.1.2. ರಫ್ತು ಯೋಜನೆ ಜಾರಿಗೊಳಿಸಲು ಅರ್ಹ ಏಜೆನ್ಸಿಗಳು :**

* ರಾಷ್ಟ್ರ ಮತ್ತು ರಾಜ್ಯಮಟ್ಟದ ಕೈಮಗ್ಗ ನಿಗಮಗಳು
* ಅಪೆಕ್ಸ್/ಪ್ರಾಥಮಿಕ ಕೈಮಗ್ಗ ಸಹಕಾರ ಸಂಘಗಳು

**6.1.3. ರಫ್ತು ಯೋಜನೆ ಶಿಫಾರಸು ಮಾಡಲು ಅರ್ಹ ಏಜೆನ್ಸಿಗಳು**

* ಕೈಮಗ್ಗ ಮತ್ತು ಜವಳಿಗೆ ಸಂಬಂಧಿತ ರಾಜ್ಯ ನಿರ್ದೇಶಕರು
* ನೇಕಾರರ ಸೇವಾ ಕೇಂದ್ರಗಳು